ಕರ್ನಾಟಕ ಸರ್ಕಾರ

# ಕರ್ನಾಟಕ ಪಶು ರೋಗಗಳ ನಿಯಂತ್ರಣ ಅಧಿನಿಯಮ, 1961

ಭಾಷೆ ಮತ್ತು ಕನ್ನಡ ಅಭಿವೃದ್ಧಿ ನಿರ್ದೇಶನಾಲಯ
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

# ಕರ್ನಾಟಕ ಪಶು ರೋಗಗಳ ನಿಯಂತ್ರಣ ಅಧಿನಿಯಮ, 1961

# ಕರ್ನಾಟಕ ಪಶುರೋಗಗಳ ನಿಯಂತ್ರಣ ಅಧಿನಿಯಮ, 1961

## ವಿಷಯಾನುಕ್ರಮಣಿಕೆ

## ಅಧ್ಯಾಯ – 1

## ಪ್ರಾರಂಭಿಕ


| | ಪ್ರಕರಣಗಳು | | ಪುಟಸಂಖ್ಯೆ |
|---|---|---|---|
| 1. | ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ | --- | 1 |
| 2. | ಪರಿಭಾಷೆಗಳು | --- | 2 |
| 3. | ಪಶುವೈದ್ಯ ಅಧಿಕಾರಿಗಳ ಮತ್ತು ಇನ್ಸ್‌ಪೆಕ್ಟರುಗಳ ನೇಮಕ | --- | 2 |
| 4. | ಪಶುವೈದ್ಯ ಅಧಿಕಾರಿಗಳು ಮತ್ತು ಇನ್ಸ್‌ಪೆಕ್ಟರುಗಳು ಸರಕಾರಿ ನೌಕರರಾಗಿರುವುದು. | --- | 2 |


## ಅಧ್ಯಾಯ – 2

## ಸೋಂಕು ಅಥವಾ ಸಾಂಕ್ರಾಮಿಕ ರೋಗಗಳ ನಿವಾರಣೆ ಮತ್ತು ನಿಯಂತ್ರಣ


| | | | |
|---|---|---|---|
| 5. | ಪಶುಗಳಿಗೆ ತಡೆಮದ್ದು ಚುಚ್ಚುವ ಮತ್ತು ಅವುಗಳ ಚಲನೆಗಳನ್ನು ಕ್ರಮಗೊಳಿಸುವ ಮತ್ತು ಮಾರುಕಟ್ಟೆ, ಜಾತ್ರೆ ಇತ್ಯಾದಿಗಳನ್ನು ನಡೆಸುವುದನ್ನು ಮತ್ತು ಸಾಂಕ್ರಾಮಿಕ ಪಶುಗಳ ವ್ಯಾಪಾರವನ್ನು ನಿಯಂತ್ರಣಗೊಳಿಸುವ ಅಧಿಕಾರ | --- | 3 |
| 6. | ಸಾಂಕ್ರಾಮಿಕ ಪಶುಗಳನ್ನು ಬೇರೆ ಇರಿಸಲು ಅಧಿಕಾರ ಮತ್ತು ಅವುಗಳ ಪರೀಕ್ಷೆ ಮತ್ತು ಚಿಕಿತ್ಸೆ | --- | 3 – 5 |
| 7. | ಸಾಂಕ್ರಾಮಿಕ ಖಾಸಗಿ ಸ್ಥಳಗಳ ಘೋಷಣೆ ಮತ್ತು ಪಶುವೈದ್ಯ ಅಧಿಕಾರಿಯಿಂದ ಇಂಥ ಸ್ಥಳಗಳ ಪರೀಕ್ಷೆ | --- | 5 |
| 8. | ಸಾಂಕ್ರಾಮಿಕ ಸಾರ್ವಜನಿಕ ಸ್ಥಳದ ಘೋಷಣೆ | --- | 5 – 6 |
| 9. | ಸಾಂಕ್ರಾಮಿಕ ಪ್ರದೇಶವೆಂದು ಘೋಷಿಸಲು ರಾಜ್ಯ ಸರಕಾರದ ಅಧಿಕಾರ | --- | 6 – 7 |
| 10. | ಸಾಂಕ್ರಾಮಿಕವಾದ ಪ್ರದೇಶಗಳಿಂದ ಅಥವಾ ಸ್ಥಳಗಳಿಂದ ಲೈಸೆನ್ಸು ಇಲ್ಲದೆ ಪಶುಗಳ ಅಥವಾ ಇತರ ವಸ್ತುಗಳ ಸಾಗಾಣಿಕೆಯನ್ನು ಪ್ರತಿಬಂಧಿಸುವುದು | --- | 7 |
| 11. | ಸಾಂಕ್ರಾಮಿಕ ಪ್ರದೇಶಗಳಿಂದ ಲೈಸೆನ್ಸಿಲ್ಲದೆ ತರಲಾದ ಪಶು ಇತ್ಯಾದಿಗಳನ್ನು ವಾಪಸ್ಸು ಮಾಡಲು ಅಗತ್ಯಪಡಿಸುವ ಅಧಿಕಾರ | --- | 7 |
| 12. | ಸಾಂಕ್ರಾಮಿಕವಾದ ಸ್ಥಳಗಳಲ್ಲಿ ಮತ್ತು ಪ್ರದೇಶಗಳಲ್ಲಿ ನಿರೋಧಕ ಸಿಡುಬು ಹಾಕುವುದು ಅಥವಾ ತಡೆಮದ್ದು ಚುಚ್ಚುವುದು | --- | 7 – 8 |

| | | | |
|---|---|---|---|
| 13. | ದೋಣಿಗಳನ್ನು ಮತ್ತು ವಾಹನಗಳನ್ನು ಸ್ವಚ್ಛ ಮಾಡುವುದು ಮತ್ತು ನಿಸ್ಸಾಂಕ್ರಾಮಿಕಗೊಳಿಸುವುದು. | --- | 8 |
| 14. | ಸಾಂಕ್ರಾಮಿಕವಾದ ಆವರಣಗಳನನ್ನು, ದೋಣಿಗಳನ್ನು ಅಥವಾ ವಾಹನಗಳನ್ನು ನಿಸ್ಸಾಂಕ್ರಾಮಿಕಗೊಳಿಸುವುದು | --- | 8 |
| 15. | ಮರಣೋತ್ತರ ಶವ ಪರೀಕ್ಷೆಯನ್ನು ನಡೆಸಲು ಪಶುವೈದ್ಯ ಅಧಿಕಾರಿಯ ಅಧಿಕಾರ | --- | 8 |
| 16. | ಸೋಂಕು ಅಥವಾ ಸಾಂಕ್ರಾಮಿಕ ರೋಗಗಳ ವರದಿ ಕೊಡುವುದು ಕೆಲವೊಂದು ವ್ಯಕ್ತಿಗಳ ಕರ್ತವ್ಯ | --- | 8 – 9 |
| 17. | ಸಾಂಕ್ರಾಮಿಕವಾದ ಪಶುಗಳನ್ನು ಪ್ರತ್ಯೇಕಿಸಿಡಬೇಕಾದ ಕರ್ತವ್ಯ | --- | 9 |
| 18. | ಪ್ರವೇಶದ ಮತ್ತು ಪರಿಶೀಲನೆಯ ಅಧಿಕಾರಗಳು | --- | 9 |
| 19. | ಸಾಂಕ್ರಾಮಿಕ ಪಶುಗಳ ಶವಗಳ ಹೂಳುವಿಕೆಯ ಅಥವಾ ವಿಲೇವಾರಿಯ ರೀತಿ | --- | 9 |
| 20. | ಸಾಂಕ್ರಾಮಿಕ ಪ್ರದೇಶಗಳಲ್ಲಿ ಮಾರುಕಟ್ಟೆ, ಜಾತ್ರೆ ಇತ್ಯಾದಿಗಳಿಗೆ ಪ್ರತಿಬಂಧ | --- | 9 |
| 21. | ಸಾಂಕ್ರಾಮಿಕ ಪಶುಗಳನ್ನು ಪರೀಕ್ಷೆಗಳಿಗೆ ಒಳಪಡಿಸಲು ಪಶುವೈದ್ಯ ಅಧಿಕಾರಿಯ ಅಧಿಕಾರಗಳು | --- | 9 |


**ಅಧ್ಯಾಯ – 3**

**ಅಪರಾಧಗಳು ಮತ್ತು ದಂಡನೆ**


| | | | |
|---|---|---|---|
| 23. | ದಂಡಗಳು | | 10 |
| 24. | ಸಾಂಕ್ರಾಮಿಕ ಪಶುಗಳನ್ನು ಸುತ್ತುಕಟ್ಟು ಹಾಕಿರದ ಭೂಮಿಯಲ್ಲಿ ಇರಿಸುವ ಅಥವಾ ಮೇಯಿಸುವ ಬಗ್ಗೆ ದಂಡ | | 11 |
| 25. | ಸಾಂಕ್ರಾಮಿಕ ಪಶುವಿನ ಮೃತದೇಹವನ್ನು ನದಿ ಇತ್ಯಾದಗಳಲಿ ಇರಿಸುವ ಬಗ್ಗೆ ದಂಡ | --- | 11 |
| 26. | ರೋಗಗ್ರಸ್ತ ಪಶುವಿನ ಮೃತದೇಹವನ್ನು ಅಗೆದು ತೆಗೆಯುವ ಬಗ್ಗೆ ದಂಡ | | 11 |
| 27. | ಸಾಂಕ್ರಾಮಿಕ ಪಶುಗಳ ಮಾರಾಟದ ಅಥವಾ ಹಸ್ತಾಂತರದ ಬಗ್ಗೆ ದಂಡ | | 11 |
| 28. | ಪೀಡನೆಗಾಗಿ ಪ್ರವೇಶ, ಪರಿಶೀಲನೆ ಅಥವಾ ವಶಪಡಿಸುವಿಕೆ ಇವುಗಳ ಬಗ್ಗೆ ದಂಡ | | 12 |


**ಅಧ್ಯಾಯ – 4**

**ಸಂಕೀರ್ಣ**


| | | | |
|---|---|---|---|
| 29. | ಆದೇಶಗಳನ್ನು ಪಾಲಿಸಲು ಮತ್ತು ಪ್ರವರ್ತನಗೊಳಿಸಲು ಅವಧಿ | | 13 |

| | | |
|---|---|---|
| 30. | ವಾರಂಟು ಇಲ್ಲದೇ ದಸ್ತಗಿರಿ ಮಾಡಲು ಪೊಲೀಸ್ ಅಧಿಕಾರಿಯ ಅಧಿಕಾರ | **13** |
| 31. | ಅಪರಾಧಗಳ ವಿಚಾರಣೆ | **13** |
| 32. | ಮ್ಯಾಜಿಸ್ಟ್ರೇಟರ ಅಧಿಕಾರ ವ್ಯಾಪ್ತಿ | **13** |
| 33. | ಪರಿಹಾರದ ಕ್ಲೇಮಿನ ಪ್ರತಿಬಂಧ | **13** |
| 34. | ಈ ಅಧಿನಿಯಮದ ಮೇರೆಗೆ ಕ್ರಮ ಕೈಕೊಳ್ಳುವ ಅಧಿಕಾರಿಗಳ ರಕ್ಷಣೆ | **13 – 14** |
| 35. | ಕೆಲವೊಂದು ದಾವೆಗಳ ಮತ್ತು ಪ್ರಾಸಿಕ್ಯೂಷನ್‌ಗಳ ಬಗ್ಗೆ ಅವಧಿ ನಿರ್ಣಯ | **14** |
| 36. | ನಿಯಮಗಳನ್ನು ರಚಿಸಲು ಅಧಿಕಾರ | **14 – 15** |
| 37. | ನಿಯಮಗಳನ್ನು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಇಡಬೇಕಾದುದು | **15** |
| 38. | ನಿರಸನ ಮತ್ತು ಉಳಿಸುವಿಕೆಗಳು | **15** |

## 1961 ರ 18ನೇ ನಂಬರಿನ ಕರ್ನಾಟಕ ಅಧಿನಿಯಮ

(1961ರ ಸೆಪ್ಟೆಂಬರ್ ಹದಿನಾಲ್ಕನೆಯ ತಾರೀಖು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟಿಸಲ್ಪಟ್ಟಿದೆ.)

# ಕರ್ನಾಟಕ ಪಶುರೋಗಗಳ ನಿಯಂತ್ರಣ ಅಧಿನಿಯಮ, 1961

(1961ರ ಸೆಪ್ಟೆಂಬರ್ ಏಳನೇಯ ತಾರೀಖು ರಾಜ್ಯಪಾಲರ ಅನುಮತಿ ಪಡೆದಿದೆ.)

ಕರ್ನಾಟಕ ರಾಜ್ಯದಲ್ಲಿ ಪಶುಗಳಿಗೆ ಬರುವ ಸೋಂಕು ಮತ್ತು ಸಾಂಕ್ರಾಮಿಕ ರೋಗಗಳ ನಿವಾರಣೆಯ ಮತ್ತು ನಿಯಂತ್ರಣದ ಬಗ್ಗೆ ಉಪಬಂಧಿಸುವ ಅಧಿನಿಯಮ

ಕರ್ನಾಟಕ ರಾಜ್ಯದಲ್ಲಿ ಪಶುಗಳಿಗೆ ಬರುವ ಸೋಂಕು ಮತ್ತು ಸಾಂಕ್ರಾಮಿಕ ರೋಗಗಳ ನಿವಾರಣೆಯ ಮತ್ತು ನಿಯಂತ್ರಣದ ಬಗ್ಗೆ ಉಪಬಂಧಿಸುವುದು ಯುಕ್ತವಾಗಿರುವುದರಿಂದ :

ಭಾರತ ಗಣರಾಜ್ಯದ ಹನ್ನೆರಡನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಮುಂದೆ ಹೇಳಿರುವಂತೆ ಅಧಿನಿಯಮಿಸಲಾಗಿದೆ.

### ಅಧ್ಯಾಯ – 1

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಕರ್ನಾಟಕ ಪಶು ರೋಗಗಳ (ನಿಯಂತ್ರಣ) ಅಧಿನಿಯಮ, 1961 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು,

(3) 38ನೇಯ ಪ್ರಕರಣದಿಂದ ನಿರಸನಗೊಳಿಸಲಾದ ಅಧಿನಿಯಮಗಳು ಜಾರಿಯಲ್ಲಿರುವ ಪ್ರದೇಶದಲ್ಲಿ ರಾಜ್ಯ ಸರಕಾರವು ಅಧಿಸೂಚನೆಯಿಂದ ಉಲ್ಲೇಖಿಸಬಹುದಾದಂಥ ತಾರೀಖಿನಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು:–** ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ, ಈ ಅಧಿನಿಯಮದಲ್ಲಿ.

(ಕ) ""ಪಶುಗಳು" ಎಂದರೆ.–

(1) ಹೋರಿಗಳು, ಎತ್ತುಗಳು, ಹಸುಗಳು, ದನಗಳು, ಮಣಕಗಳು, ಕರುಗಳು, ಎಮ್ಮೆಗಳು, ಕೋಣಗಳು, ಆನೆಗಳು, ಕುರಿಗಳು, ಆಡುಗಳು ಮತ್ತು ಈ ಶಬ್ದದ ಅರ್ಥದಲ್ಲಿ ರಾಜ್ಯ ಸರಕಾರವು ಈ ಬಗ್ಗೆ ಅಧಿಸೂಚಿಸಬಹುದಾದ ಎಲ್ಲ ಇತರೇ ಮೆಲುಕುಹಾಕುವ ಪಶುಗಳು ಸೇರುತ್ತವೆ : ಮತ್ತು

(2) ನಾಯಿಗಳು, ಹಂದಿಗಳು, ಕುದುರೆಗಳು, ಒಂಟೆಗಳು, ಕತ್ತೆಗಳು, ಹೇಸರಗತ್ತೆಗಳು, ಕೋಳಿಗಳು, ಹುಂಜಗಳು ಮತ್ತು ರಾಜ್ಯ ಸರ್ಕಾರವು ಈ ಬಗ್ಗೆ ಅಧಿಸೂಚಿಸಬಹುದಾದಂಥ ಎಲ್ಲ ಸಾಕು ಪಶುಗಳು:

(ಖ) ""ಸೋಂಕು ಅಥವಾ ಸಾಂಕ್ರಾಮಿಕ ರೋಗಗಳು" ಎಂದರೆ, ಗೋಮಾರಿ ರೋಗ, ನೆರಡಿ ರೋಗ, ರಕ್ತಸ್ರಾವ ನಂಜು, ನಾಯಿ ಹುಚ್ಚು, (ಕುದುರೆ) ಸಿಂಬಳರೋಗ ಮತ್ತು ರಸಗ್ರಂಥಿಗಳು ರೀಗ, ಸಿಡುಬು ಸ್ರಾವದ ಸಾಂಕ್ರಾಮಿಕ ರೋಗ, ಸುರಾ, ಡೌರೀನು, ಕುದುರೆಗಳ ಇನ್‌ಪ್ಲುಯೆಂಝು ಅಥವಾ ಕೆಂಗಣ್ಣೂತ, ಕುರಿ, ಸಿಡುಬು,

ರಾಣಿ ಖೇತರೋಗ, ರಪ್ಪೆರೋಗ, ಅಡಿ ಬಾಯಿ ರೋಗ, ಕ್ಷಯ ರೋಗ, ಜಾನ್ ರೋಗ ಮತ್ತು ಈ ಶಬ್ದದ ಅರ್ಥದಲ್ಲಿ, ರಾಜ್ಯ ಸರಕಾರವು ಅಧಿಸೂಚಿಸಬಹುದಾದಂಥ ಇತರ ರೋಗಗಳು ಸೇರುತ್ತವೆ.

(ಗ) ""ಸಾಂಕ್ರಾಮಿಕ ಪ್ರದೇಶ" ಎಂದರೆ, 9ನೇಯ ಪ್ರಕರಣದ ಮೇರೆಗೆ ಸಾಂಕ್ರಾಮಿಕ ಪ್ರದೇಶವೆಂದು ಘೋಷಿಸಲಾದ ಪ್ರದೇಶ ;

(ಘ) ""ಸಾಂಕ್ರಾಮಿಕ ಪಶು" ಎಂದರೆ, ಸೋಂಕು ಅಥವಾ ಸಾಂಕ್ರಾಮಿಕ ರೋಗ ತಗುಲಿದ, ಅಥವಾ, ಹಾಗೆ ತಗುಲಿದ ಪಶುವಿನ ಸಂಪರ್ಕದಲ್ಲಿ ಅಥವಾ ತೀರ ಹತ್ತಿರದಲ್ಲಿ ಇತ್ತೀಚೆಗೆ ಇದ್ದಿರುವ ಪಶು ;

(ಙ) "ಇನ್ಸ್‌ಪೆಕ್ಟರು" ಎಂದರೆ, 3ನೇ ಪ್ರಕರಣದ ಮೇರೆಗೆ ನೇಮಿಸಲಾದ ಅಥವಾ ಶಕ್ತಗೊಳಿಸಲಾದ ಇನ್ಸ್‌ಪೆಕ್ಟರು ;

(ಚ) ""ಅಧಿಸೂಚನೆ" ಎಂದರೆ, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ ;

(ಛ) ""ನಿಯಮಿಸಲಾದ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಲಾದ ನಿಯಮಗಳಿಂದ ನಿಯಮಿಸಲಾದುದು;

(ಜ) ""ನಿಯಮಗಳು" ಎಂದರೆ, 36ನೇಯ ಪ್ರಕರಣದ ಮೇರೆಗೆ ರಚಿಸಲಾದ ನಿಯಮಗಳು ;

(ಝ) ""ಪಶುವೈದ್ಯ ಅಧಿಕಾರಿ" ಎಂದರೆ 3ನೇಯ ಪ್ರಕರಣದ ಮೇರೆಗೆ ನೇಮಿಸಲಾದ ಅಧಿಕಾರಿ.

**3. ಪಶುವೈದ್ಯ ಅಧಿಕಾರಿಗಳ ಮತ್ತು ಇನ್ಸ್‌ಪೆಕ್ಟರುಗಳ ನೇಮಕ:–** (1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಪಶುವೈದ್ಯ ಶೀಘ್ರದಲ್ಲಿ ಸರಿಯಾಗಿ ಅರ್ಹತೆ ಹೊಂದಿದ ವ್ಯಕ್ತಿಯನ್ನು, ಆ ಅಧಿಸೂಚನೆಯಲ್ಲಿ ಉಲ್ಲೇಖಿಸಬಹುದಾದಂಥ ಸ್ಥಳೀಯ ಪ್ರದೇಶಕ್ಕಾಗಿ ಈ ಅಧಿನಿಯಮ ಉದ್ದೇಶಗಳಿಗಾಗಿ ಪಶುವೈದ್ಯ ಅಧಿಕಾರಿಯೆಂದು ನೇಮಿಸಬಹುದು.

(2) ರಾಜ್ಯ ಸರಕಾರವು ಅಥವಾ ಆ ಬಗ್ಗೆ ಅಧಿಕೃತಗೊಳಿಸಲಾದ ಯಾವನೇ ಅಧಿಕಾರಿಯು ಪಶುವೈದ್ಯ ಶಾಸ್ತ್ರದಲ್ಲಿ ಸರಿಯಾಗಿ ಅರ್ಹತೆ ಪಡೆದ ಯಾವನೇ ವ್ಯಕ್ತಿಯನ್ನು ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉದ್ದೇಶಗಳಿಗಾಗಿ ಇನ್ಸ್‌ಪೆಕ್ಟರ್‌ನೆಂದು ನೇಮಿಸಬಹುದು ಮತ್ತು ಈ ಅಧಿನಿಯಮದ ಮೇರೆಗೆ ಯಾವ ಪ್ರದೇಶದಲ್ಲಿ ಇನ್ಸ್‌ಪೆಕ್ಟರ್‌ನಿಗಿರುವ ಅಧಿಕಾರಗಳನ್ನು ಚಲಾಯಿಸತಕ್ಕದ್ದೋ ಮತ್ತು ಆತನ ಕರ್ತವ್ಯಗಳನ್ನು ನೆರವೇರಿಸತಕ್ಕುದ್ದೋ ಆ ಪ್ರದೇಶವನ್ನು ಉಲ್ಲೇಖಿಸಬಹುದು.

(3) ಪಶುವೈದ್ಯ ಅಧಿಕಾರಿಯು ತಾನು ನೇಮಕವಾಗಿರುವ ಪ್ರದೇಶದಲ್ಲಿ ಈ ಅಧಿನಿಯಮದ ಮೇರೆಗೆ ಇನ್ಸ್‌ಪೆಕ್ಟರ್‌ನಿಗಿರುವ ಎಲ್ಲ ಅಧಿಕಾರಿಗಳನ್ನು ಚಲಾಯಿಸತಕ್ಕದ್ದು, ಮತ್ತು ಪಶುವೈದ್ಯಕೀಯ ಅಧಿಕಾರಿಯಾಗಿ ತನಗಿರುವ ಅಧಿಕಾರದ ಜೊತೆಗೆ ಇಂಥ ಅಧಿಕಾರಗಳನ್ನು ಚಲಾಯಿಸಬಹುದು.

**4. ಪಶುವೈದ್ಯ ಅಧಿಕಾರಿಗಳು ಮತ್ತು ಇನ್ಸ್‌ಪೆಕ್ಟರುಗಳು ಸರಕಾರಿ ನೌಕರರಾಗಿರುವುದು:–** ಈ ಅಧಿನಿಯಮದ ಮೇರೆಗೆ ನೇಮಿಸಲ್ಪಟ್ಟ ಪ್ರತಿಯೊಬ್ಬ ಪಶುವೈದ್ಯ ಅಧಿಕಾರಿಯನ್ನು ಮತ್ತು ಪ್ರತಿಯೊಬ್ಬ ಇನ್ಸ್‌ಪೆಕ್ಟರನನ್ನು ಭಾರತ ದಂಡ ಸಂಹಿತೆಯ 21ನೇ ಯ ಪ್ರಕರಣದ ಅರ್ಥದಲ್ಲಿ ಸರಕಾರಿ ನೌಕರರೆಂದು ಭಾವಿಸತಕ್ಕದ್ದು.

## ಅಧ್ಯಾಯ – 2

## ಸೋಂಕು ಅಥವಾ ಸಾಂಕ್ರಾಮಿಕ ರೋಗಗಳ ನಿವಾರಣೆ ಮತ್ತು ನಿಯಂತ್ರಣ

**5. ಪಶುಗಳಿಗೆ ತಡೆಮದ್ದು ಚುಚ್ಚುವ ಮತ್ತು ಅವುಗಳ ಚಲನಗಳನ್ನು ಕ್ರಮಗೊಳಿಸುವ ಮತ್ತು ಮಾರುಕಟ್ಟೆ ಜಾತ್ರೆ ಇತ್ಯಾದಿಗಳನ್ನು ನಡೆಸುವುದನ್ನು ಮತ್ತು ಸಾಂಕ್ರಾಮಿಕ ಪಶುಗಳ ವ್ಯಾಪಾರವನ್ನು ನಿಯಂತ್ರಣಗೊಳಿಸುವ ಅಧಿಕಾರ:–** (1) ಆ ಯಾವುದೇ ಪ್ರದೇಶದಲ್ಲಿ ಅಥವಾ ಅಲ್ಲಿಂದ ಯಾವುದೇ ಸೋಂಕಿನ ಅಥವಾ ಸಾಂಕ್ರಾಮಿಕ ರೋಗದ ತಲೆದೋರಿಕೆಯನ್ನು ಅಥವಾ ಹರಡುವಿಕೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ,–

(ಕ) ಅಂಥ ಪ್ರದೇಶದಲ್ಲಿ ಎಲ್ಲ ಪಶುಗಳಿಗೆ ಅಥವಾ ಅಂಥ ಪಶುಗಳ ಯಾವುದೇ ವರ್ಗಕ್ಕೆ, ನಿಯಮಿಸಬಹುದಾದಂಥ ನಿಯಮಗಳ ಮೇರೆಗೆ ಅಥವಾ ಅಧಿಸೂಚನೆಯಲ್ಲಿ ಉಲ್ಲೇಖಿಸಬಹುದಾದಂಥ ನಿರ್ದೇಶಗಳಿಗನುಸಾರವಾಗಿ ಕಡ್ಡಾಯವಾಗಿ ತಡೆಮದ್ದು ಚುಚ್ಚತಕ್ಕದೆಂದು ನಿರ್ದೇಶಿಸಬಹುದು.

(ಖ) ರಾಜ್ಯ ಸರಕಾರದ ಅಭಿಪ್ರಾಯದಲ್ಲಿ ಸಾಂಕ್ರಾಮಿಕತೆಯನ್ನು ಒಯ್ಯುವ ಜೀವಂತ ಅಥವಾ ಮೃತ ಪಶುಗಳನ್ನು ಅಥವಾ ಆ ಪಶುಗಳ ಅಥವಾ ಅವುಗಳ ಯವುದೇ ಭಾಗಗಳ ಉತ್ಪನ್ನಗಳನ್ನು ಅಥವಾ ಆ ಪಶುಗಳ ಸಲುವಾಗಿ ಉಪಯೋಗಿಸಲಾದ ಯಾವುದೇ ಮೇವನ್ನು ಹಾಸನ್ನು ಅಥವಾ ಇತರ ವಸ್ತುಗಳನ್ನು (1) ಅಂಥ ಪ್ರದೇಶದೊಳಕ್ಕೆ ಅಥವಾ ರಾಜ್ಯದ ಅಥವಾ ಅದರ ಯಾವುದೇ ಭಾಗದ ಪ್ರದೇಶದೊಳಕ್ಕೆ ತರುವುದನ್ನು, (2) ರಾಜ್ಯದ ಅಥವಾ ಅದರ ಯಾವುದೇ ಭಾಗದ ಅಂಥ ಪ್ರದೇಶದಿಂದ ಇತರ ಯಾವುದೇ ಪ್ರದೇಶಕ್ಕೆ ಸಾಗಿಸುವುದನ್ನು ಅಥವಾ (3) ಅಂಥ ಪ್ರದೇಶದಲ್ಲಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸುವುದನ್ನು ನಿಯಮಿಸಬಹುದಾದಂಥ ಅಥವಾ ಅಧಿಸೂಚನೆಯಲ್ಲಿ ಉಲ್ಲೇಖಿಸಬಹುದಾದಂಥ ರೀತಿಯಲ್ಲಿ ಮತ್ತು ಆ ಮಟ್ಟಿಗೆ ನಿರೋಧಿಸಬಹುದು ಅಥವಾ ಕ್ರಮಗೊಳಿಸಬಹುದು.

(ಗ) ನಿಯಮಿಸಬಹುದಾದಂಥ ಅಥವಾ ಅಧಿಸೂಚನೆಯಲ್ಲಿ ಉಲ್ಲೇಖಿಸಬಹುದಾದಂಥ ರೀತಿಯಲ್ಲಿ ಮತ್ತು ಆ ಮಟ್ಟಿಗೆ ಅಂಥ ಪ್ರದೇಶದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಅಥವಾ ರಾಜ್ಯದಲ್ಲಿನ ಇತರ ಯಾವುದೇ ಪ್ರದೇಶದಲ್ಲಿ

(1) ಪಶು ಮಾರುಕಟ್ಟೆಗಳು, ಪಶು ಜಾತ್ರೆಗಳು, ಪಶು ಪ್ರದರ್ಶನಗಳನ್ನು ನಡೆಸುವುದನ್ನು, ಅಥವಾ ಪಶುಗಳ ಇತರ ಒಟ್ಟುಗೂಡಿಸುವುದನ್ನು, ಅಥವಾ

(2) ಸಾಂಕ್ರಾಮಿಕ ಪಶುಗಳು ಅಥವಾ ಅವುಗಳ ಯಾವುವೇ ಉತ್ಪನ್ನಗಳು, ಅಥವಾ ಮರಣಕಾಲದಲ್ಲಿ ಸಾಂಕ್ರಾಮಿಕವಾಗಿದ್ದ ಪಶುಗಳ ಮೃತ ದೇಹಗಳು ಅಥವಾ ಅಂಥ ಪಶುಗಳ ಯಾವುವೇ ಭಾಗಗಳು ಅಥವಾ ಅಂಥ ಪಶುಗಳ ಸಂಬಂಧದಲ್ಲಿ ಉಪಯೋಗಿಸಲಾಗುತ್ತಿದ್ದ, ರಾಜ್ಯ ಸರಕಾರದ ಅಭಿಪ್ರಾಯದಲ್ಲಿ ಸಾಂಕ್ರಾಮಿಕತೆಯನ್ನು ಸಾಗಿಸಬಹುದಾಗಿರುವ ಯಾವುವೇ ಮೇವು, ಹಾಸು ಅಥವಾ ಇತರ ವಸ್ತು ಇವುಗಳ ಮಾರಾಟವನ್ನು ಅಥವಾ ಇತರ ರೀತಿಯಲ್ಲಿ ಅವುಗಳ ವ್ಯಾಪಾರವನ್ನು ನಿರೋಧಿಸಬಹುದು ಅಥವಾ ಕ್ರಮಗೊಳಿಸಬಹುದು.

**6. ಸಾಂಕ್ರಾಮಿಕ ಪಶುಗಳನ್ನು ಬೇರೆ ಇರಿಸಲು ಅಧಿಕಾರ ಮತ್ತು ಅವುಗಳ ಪರೀಕ್ಷೆ ಮತ್ತು ಚಿಕಿತ್ಸೆ:–** (1) ಯಾವುದೇ ಪಶು ಸಾಂಕ್ರಾಮಿಕವಾಗಿದೆಯೆಂದು ನಂಬಲು ಇನ್ಸ್‌ಪೆಕ್ಟರಿಗೆ ಕಾರಣವಿರುವಲ್ಲಿ ಅವನು, ಅಂಥ ಪಶುವಿನ ಒಡೆಯನಿಗೆ ಅಥವಾ ಅದರ ಸ್ವಾಧೀನವನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಗೆ ಲಿಖಿತ ಆದೇಶ ಕೊಡುವ ಮೂಲಕ

(ಕ) ಸದ್ಯಕ್ಕೆ ಅದು ಇದ್ದ ಸ್ಥಳದಲ್ಲಿಯೇ ಅದನ್ನು ಇರಿಸಬೇಕೆಂದು ಅಥವಾ ಆದೇಶದಲ್ಲಿ ಉಲ್ಲೇಖಿಸಬಹುದಾದಂಥ ಬೇರೆ ಇರಿಸುವ ಅಥವಾ ಪ್ರತ್ಯೇಕಿಸಿ ಇರಿಸುವ ಸ್ಥಳಕ್ಕೆ ಅದನ್ನು ಸಾಗಿಸಬೇಕೆಂದು ಅಥವಾ ಸಾಗಿಸಲು ಅವಕಾಶ ಕೊಡಬೇಕೆಂದು;

(ಖ) ಆದೇಶದಲ್ಲಿ ಉಲ್ಲೇಖಿಸಬಹುದಾದಂಥ ಚಿಕಿತ್ಸೆಗೆ ಅದನ್ನು ಒಳಪಡಿಸಬೇಕೆಂದು; ನಿರ್ದೇಶಿಸಬಹುದು.

ಅಂಥ ಪಶುವಿನ ಒಡೆಯನು ಅಥವಾ ಸ್ವಾಧೀನವನ್ನು ಅಥವಾ ನಿಯಂತ್ರಣವನ್ನು ಹೊಂದಿದಂಥ ವ್ಯಕ್ತಿಯು ಅಂತ ಆದೇಶವನ್ನು ಪಾಲಿಸತಕ್ಕದ್ದು.

(2) ಪಶುವಿನ ಸ್ವಾಧೀನವನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ಯಾವ ವ್ಯಕ್ತಿಯೂ ಇರದಿದ್ದಲ್ಲಿ ಮತ್ತು ಒಡೆಯನು ಯಾರೆಂಬುದು ಗೊತ್ತಿಲ್ಲದಿದ್ದಲ್ಲಿ ಅಥವಾ ಅಸಮರ್ಪಕವಾದ ವಿಳಂಬವಿಲ್ಲದೆ ಅವನನ್ನು ಗೊತ್ತುಹಚ್ಚುವುದು ಸಾಧ್ಯವಿರದಿದ್ದಲ್ಲಿ ಅಥವಾ ಅಸಮರ್ಪಕವಾದ ವಿಳಂಬವಿಲ್ಲದೇ ಅವನಿಗೆ ಆದೇಶವನ್ನು ತಿಳಿಸುವುದು ಸಾಧ್ಯವಿರದಿದ್ದಲ್ಲಿ ಅಥವಾ ಅದರ ಸ್ವಾಧೀನವನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು (1)ನೇಯ ಉಪಪ್ರಕರಣದ ಮೇರೆಗೆ ಆದೇಶವನ್ನು ಇನ್ಸ್‌ಪೆಕ್ಟರನ ಅಭಿಪ್ರಾಯದಲ್ಲಿ ಯುಕ್ತವಾದ ಕಾಲದೊಳಗಾಗಿ ಪಾಲಿಸಲು ತಪ್ಪಿದ್ದಲ್ಲಿ, ಇನ್ಸ್‌ಪೆಕ್ಟರನು ಆ ಪಶುವನ್ನು ವಶಪಡಿಸಿಕೊಳ್ಳತಕ್ಕದ್ದು. ಮತ್ತು ಬೇರೆ ಇರಿಸುವ ಅಥವಾ ಪ್ರತ್ಯೇಕಿಸಿ ಇರಿಸುವ ಸ್ಥಳಕ್ಕೆ ಅದನ್ನು ಸಾಗಿಸತಕ್ಕದ್ದು ಮತ್ತು ಅವನು ಅದನ್ನು ಅವಶ್ಯಕವಾಗಬಹುದಾದಂಥ ಚಿಕಿತ್ಸೆಗೆ ಒಳಪಡಿಸಬಹುದು.

(3) (1) ನೇಯ ಉಪಪ್ರಕರಣದ ಅಥವಾ (2)ನೆಯ ಉಪಪ್ರಕರಣದ ಮೇರೆ ಮಾಡಲಾದ ಪ್ರತಿಯೊಂದು ಆದೇಶದ ಅಥವಾ ವಶಪಡಿಸಿಕೊಳ್ಳುವಿಕೆಯ ಬಗ್ಗೆ ಇನ್ಸ್‌ಪೆಕ್ಟರನು ಪಶುವೈದ್ಯ ಅಧಿಕಾರಿಗೆ ವರದಿ ಮಾಡತಕ್ಕದ್ದು.

(4) (3)ನೇಯ ಉಪಪ್ರಕರಣದ ಮೇರೆಗೆ ವರದಿ ತಲುಪಿದ ಮೇಲೆ ಪಶುವೈದ್ಯ ಅಧಿಕಾರಿಯು ಸಾಧ್ಯವಿದ್ದಷ್ಟು ಬೇಗನೆ ಆ ಪಶುವನ್ನು ಮತ್ತು ಅದರ ಸಂಪರ್ಕದಲ್ಲಿದ್ದ ಅಥವಾ ಅದರ ತೀರ ಹತ್ತಿರದಲ್ಲಿದ್ದ ಎಲ್ಲ ಪಶುಗಳನ್ನು ಪರೀಕ್ಷಿಸತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಯಾವುದೇ ಪಶುವನ್ನು ನಿಯಮಿಸಲಾದ ಯಾವುದೇ ಪರೀಕ್ಷೆಗೆ ಒಪ್ಪಿಸಬಹುದು.

(5) ಇಂಥ ಪರೀಕ್ಷೆಯ ತರುವಾಯ, ಪಶುವೈದ್ಯ ಅಧಿಕಾರಿಯು

(ಕ) ಯಾವುದೇ ಪಶುವು ಸಾಂಕ್ರಾಮಿಕವಾಗಿಲ್ಲವೆಂದು ಅಭಿಪ್ರಾಯವುಳ್ಳನಾದರೆ, ಇನ್ಸ್‌ಪೆಕ್ಟರನು ಅದನ್ನು ತನ್ನ ಅಭಿಪ್ರಾಯದಲ್ಲಿ ಅದರ ಸ್ವಾಧೀನಕ್ಕೆ ಹಕ್ಕಿದ್ದ ವ್ಯಕ್ತಿಗೆ ಕೂಡಲೇ ಮರಳಿಸತಕ್ಕದ್ದು;

ಪರಂತು, ಇನ್ಸ್‌ಪೆಕ್ಟರನ ಅಭಿಪ್ರಾಯದಲ್ಲಿ, ಅಂಥ ವ್ಯಕ್ತಿಯು ಸಿಕ್ಕಲಾರನೆಂದಾದರೆ ಅವನು ಆ ಪಶವನ್ನು ಅತಿ ಸಮೀಪದ ದನಗಳ ದೊಡ್ಡಿಗೆ ಕಳುಹಿಸತಕ್ಕದ್ದು; ಅಥವಾ ನಿಯಮಿಸಬಹುದಾದ ಬೇರೆ ರೀತಿಯಲ್ಲಿ ಅದರ ಬಗ್ಗೆ ವ್ಯವಹರಿಸಿತಕ್ಕದ್ದು;

(ಖ) ಯಾವುದೇ ಪಶುವಿಗೆ ಸೋಂಕು ಅಥವಾ ಸಾಂಕ್ರಾಮಿಕ ರೋಗವು ತಗುಲಿದೆ ಎಂದು ಲಿಖಿತದಲ್ಲಿ ಪ್ರಮಾಣೀಕರಿಸಿದರೆ, ಇನ್ಸ್‌ಪೆಕ್ಟರನು ಆ ಪಶುವನ್ನು ನಾಶಮಾಡತಕ್ಕದ್ದು ಅಥವಾ ನಿಯಮಿಸಬಹುದಾದ ಇತರ ರೀತಿಯಲ್ಲಿ ಅದರ ಬಗ್ಗೆ ವ್ಯವಹರಿಸಿತಕ್ಕದ್ದು; ಅಥವಾ

(ಗ) ಸೋಂಕು ಅಥವಾ ಸಾಂಕ್ರಾಮಿಕ ರೋಗ ತಗುಲಿರದಿದ್ದರೂ ಯಾವುದೇ ಪಶುವು ಸಾಂಕ್ರಾಮಿಕವಾಗಿದೆಯೆಂದು ಲಿಖಿತದಲ್ಲಿ ಪ್ರಮಾಣೀಕರಿಸಿದರೆ, ಆ ಬಗ್ಗೆ ಯಾವುದಾದರೂ ಚಿಕಿತ್ಸೆ ಇದ್ದರೆ ಅದಕ್ಕೆ

ಆ ಪಶುವನ್ನು ಒಳಪಡಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ಬೇರೆ ರೀತಿಯಲ್ಲಿ ಅದರ ಬಗ್ಗೆ ವ್ಯವಹರಿಸತಕ್ಕದ್ದು.

(6) ಯಾವುದೇ ಪಶುವು ಸಾಂಕ್ರಾಮಿಕವಾಗಿದೆಯೆಂಬ ಬಗ್ಗೆ ಅಥವಾ ಸೋಂಕು ಅಥವಾ ಸಾಂಕ್ರಾಮಿಕ ರೋಗ ತಗುಲಿದೆಯೆಂದು ಸಂದೇಹಪಡಬಹುದಾದ ಪಶುವಿನ ಸಂಪರ್ಕದಲ್ಲಿತ್ತೆಂಬ ಅಥವಾ ಅದಕ್ಕೆ ಅತಿ ಹತ್ತಿರದಲ್ಲಿತ್ತೆಂಬ ಬಗ್ಗೆ, ಪಶುವೈದ್ಯ ಅಧಿಕಾರಿಯ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

**7. ಸಾಂಕ್ರಾಮಿಕ ಖಾಸಗಿ ಸ್ಥಳಗಳ ಘೋಷಣೆ ಮತ್ತು ಪಶುವೈದ್ಯ ಅಧಿಕಾರಿಯಿಂದ ಇಂಥ ಸ್ಥಳಗಳ ಪರೀಕ್ಷೆ** (1) ತಾತ್ಕಾಲಿಕವಾಗಿ ಅಥವಾ ಬೇರೆ ರೀತಿಯಲ್ಲಿ ಪಶುಗಳನ್ನು ಇರಿಸಲಾಗಿದ್ದ ಯಾವುದೇ ಭೂಮಿಯಲ್ಲಿ, ಕಟ್ಟಡದಲ್ಲಿ ಅಥವಾ ಇತರ ಸ್ಥಳದಲ್ಲಿ ಸಾಂಕ್ರಾಮಿಕ ಪಶು ಇದೆಯೆಂದು ನಂಬಲು ಇನ್ಸ್‌ಪೆಕ್ಟರನಿಗೆ ಕಾರಣವಿದ್ದರೆ, ಅವನು ಲಿಖಿತ ಆದೇಶದ ಮೂಲಕ, ಅಂಥ ಭೂಮಿಯು, ಕಟ್ಟಡವು ಅಥವಾ ಸ್ಥಳವು ಸಾಂಕ್ರಾಮಿಕ ಸ್ಥಳವಾಗಿದೆಯೆಂದು ಕೂಡಲೇ ಘೋಷಿಸತಕ್ಕುದು; ಮತ್ತು ಆ ಆದೇಶದ ಒಂದು ಪ್ರತಿಯನ್ನು ಸಾಂಕ್ರಾಮಿಕ ಸ್ಥಳದ ಒಡೆಯನಿಗೆ, ಅಧಿಭೋಗದಾರನಿಗೆ ಅಥವಾ ಅದರ ಸ್ವಾಧೀನವನ್ನು ಹೊಂದಿರುವ ವ್ಯಕ್ತಿಗೆ ತಲುಪಿಸತಕ್ಕದ್ದು ಮತ್ತು ತನ್ನ ಆ ಕ್ರಮದ ಬಗ್ಗೆ ಪಶುವೈದ್ಯ ಅಧಿಕಾರಿಗೆ ವರದಿ ಮಾಡತಕ್ಕದ್ದು:

ಪರಂತು ಪಶುಗಳನ್ನು ಮಾರಾಟಕ್ಕಾಗಿ, ಪ್ರದರ್ಶನಕ್ಕಾಗಿ ಅಥವಾ ರವಾನೆಗಾಗಿ ತಾತ್ಕಾಲಿಕವಾಗಿ ಇಡಲಾಗಿದ್ದ ಸ್ಥಳೀಯ ಪ್ರಾಧಿಕಾರದ ಅಥವಾ ರೈಲ್ವೆ ಆಡಳಿತದ ಒಡೆತನದಲ್ಲಿದ್ದ ಅಥವಾ ಅವುಗಳ ನಿಯಂತ್ರಣ ಮತ್ತು ವ್ಯವಸ್ಥೆಯಲ್ಲಿದ್ದ ಯಾವುದೇ ಸ್ಥಳಕ್ಕೆ ಈ ಉಪ ಪ್ರಕರಣವು ಅನ್ವಯಿಸತಕ್ಕದ್ದಲ್ಲ.

(2) (1) ನೇ ಉಪಪ್ರಕರಣದ ಮೇರೆಗೆ ವರದಿ ಬಂದ ಮೇಲೆ ಪಶುವೈದ್ಯ ಅಧಿಕಾರಿಯು ಆದಷ್ಟು ಬೇಗನೆ, ಸಾಂಕ್ರಾಮಿಕ ಸ್ಥಳವನ್ನು ಮತ್ತು ಅದರಲ್ಲಿ ಇರಿಸಲಾಗಿದ್ದ ಪಶುಗಳನನು ಪರೀಕ್ಷಿಸತಕ್ಕದ್ದು ಮತ್ತು ಇನ್ಸ್‌ಪೆಕ್ಟರನ ಆದೇಶವನ್ನು ಸ್ಥಿರೀಕರಿಸತಕ್ಕದ್ದು ಅಥವಾ ರದ್ದುಗೊಳಿಸತಕ್ಕದ್ದು.

(3) ಪಶುವೈದ್ಯ ಅಧಿಕಾರಿಯು ಆ ಆದೇಶವನ್ನು ಸ್ಥಿರೀಕರಿಸಿದರೆ, ಸಾಂಕ್ರಾಮಿಕ ಸ್ಥಳದಿಂದ ಒಂದು ಮೈಲಿಗೆ ಮೀರದ ತ್ರಿಜ್ಯದಲ್ಲಿರುವ ಪಶುಗಳನ್ನು ತಾತ್ಕಾಲಿಕವಾಗಿ ಅಥವಾ ಬೇರೆ ರೀತಿಯಾಗಿ ಇರಿಸಲಾಗಿದ್ದ ಎಲ್ಲ ಸ್ಥಳಗಳ ಒಡೆಯನಿಗೆ, ಆಧಿಭೋಗದಾರನಿಗೆ, ಅಥವಾ ಅವುಗಳ ಸ್ವಾಧೀನ ಹೊಂದಿದ ವ್ಯಕ್ತಿಗೆ ಅಂಥ ಸ್ಥಳವು ಸಾಂಕ್ರಾಮಿಕ ಸ್ಥಳವೆಂದು ಘೋಷಿಸುತ್ತ ಒಂದು ನೋಟೀಸನ್ನು ಜಾರಿ ಮಾಡಿಸಬಹುದು. ಪಶುವೈದ್ಯ ಅಧಿಕಾರಿಯು ಈ ಉಪಪ್ರಕರಣದ ಮೇರೆಗೆ ತಾನು ಕೈಗೊಂಡ ಕ್ರಮವನ್ನು ನಿಯಮಿಸಲಾದ ಪ್ರಾಧಿಕಾರಿಗೆ ಕೂಡಲೇ ವರದಿ ಮಾಡತಕ್ಕದ್ದು.

(4) ಪಶುವೈದ್ಯ ಅಧಿಕಾರಿಯು ಇನ್ಸ್‌ಪೆಕ್ಟರನು ಹೊರಡಿಸಿದ ಆದೇಶವನ್ನು ರದ್ದುಗೊಳಿಸಿದರೆ, ಆ ಆದೇಶದಲ್ಲಿ ಉಲ್ಲೇಖಿಸಿದ್ದ ಸ್ಥಳವು ಸಾಂಕ್ರಾಮಿಕ ಸ್ಥಳವಾಗಿರುವುದು ಕೊನೆಗೊಳ್ಳತಕ್ಕದ್ದು ಮತ್ತು ಇನ್ಸ್‌ಪೆಕ್ಟರನು, ಆ ಕಟ್ಟಡದ ಒಡೆಯನಿಗೆ, ಅಧಿಭೋಗದಾರನಿಗೆ ಅಥವಾ ಅದರ ಸ್ವಾಧೀನ ಹೊಂದಿರುವವನಿಗೆ ನೋಟೀಸಿನ ಮೂಲಕ ಅದನ್ನು ತಿಳಿಸತಕ್ಕದ್ದು.

**8. ಸಾಂಕ್ರಾಮಿಕ ಸಾರ್ವಜನಿಕ ಸ್ಥಳದ ಘೋಷಣೆ :-** (1) ಪಶುಗಳನ್ನು ಮಾರಾಟದ ಪ್ರದರ್ಶನದ ಅಥವಾ ರವಾನೆಯ ಉದ್ದೇಶಗಳಿಗಾಗಿ ತಾತ್ಕಾಲಿಕವಾಗಿ ಇರಿಸಲಾಗಿದೆ ಯಾವುದೇ ಸ್ಥಳೀಯ ಪ್ರಾಧಿಕಾರದ ಅಥವಾ ರೈಲ್ವೆ ಆಡಳಿತದ ಒಡೆತನಕ್ಕೆ ಸೇರಿದ ಅಥವಾ ಅವುಗಳ ನಿಯಂತ್ರಣಕ್ಕೆ ಅಥವಾ ವ್ಯವಸ್ಥೆಗೆ ಸೇರಿದ ಯಾವುದೇ ಸ್ಥಳದಲ್ಲಿ ಸಾಂಕ್ರಾಮಿಕ ಪಶುವನ್ನು ಇರಿಸಿದೆಯೆಂದು ಅಥವಾ ಇರಿಸಲಾಗಿದೆಯೆಂದು ನಂಬಲು ಪಶುವೈದ್ಯ ಅಧಿಕಾರಿಗೆ ಕಾರಣವಿರುವಲ್ಲಿ, ಅವನು ಅಂಥ ಸ್ಥಳವು ಸಾಂಕ್ರಾಮಿಕ ಸ್ಥಳವಾಗಿದೆಯೆಂಬುದಾಗಿ ಲಿಖಿತ ಆದೇಶದ ಮೂಲಕ ಘೋಷಿಸಬಹುದು.

(2) ಪಶುವೈದ್ಯ ಅಧಿಕಾರಿಯು

(ಕ) (1) ನೇ ಉಪಪ್ರಕರಣದ ಮೇರೆಗೆ ತನ್ನಿಂದ ಮಾಡಲಾದ ಆದೇಶದ ಪ್ರತಿಯನ್ನು ಆ ಸಾಂಕ್ರಾಮಿಕ ಸ್ಥಳದಲ್ಲಿ ಎದ್ದು ಕಾಣುವ ಹಾಗೆ, ಸ್ಥಳೀಯ ಭಾಷೆಯಲ್ಲಿ ಪ್ರದರ್ಶಿಸುವಂತೆ ಮಾಡತಕ್ಕದ್ದು.

(ಖ) ಆ ಅದೇಶದ ಒಂದು ಪ್ರತಿಯನ್ನು ಸಂದರ್ಭಾನುಸಾರ ಸ್ಥಳೀಯ ಪ್ರಾಧಿಕಾರಿಯ ಕಾರ್ಯಾಲಯದಲ್ಲಿ ಅಥವಾ ರೈಲ್ವೆ ಆಡಳಿತದ ಅತಿ ಸಮೀಪದ ಸ್ಟೇಶನ್ ಮಾಸ್ತರನಿಗೆ ತಲುಪುವಂತೆ ಮಾಡತಕ್ಕುದು.

(ಗ) ಅದರ ಇನ್ನೊಂದು ಪ್ರತಿಯನ್ನು ತೀರ ಸಮೀಪದ ಪೋಲೀಸ್ ಠಾಣೆಗೆ ಕಳುಹಿಸುವಂತೆ ಮಾಡತಕ್ಕದ್ದು; ಮತ್ತು

(ಘ) ತಾನು ತೆಗೆದುಕೊಂಡ ಕ್ರಮದ ಬಗ್ಗೆ ನಿಯಮಿಸಲಾದ ಪ್ರಾಧಿಕಾರಿಗೆ ಕೂಡಲೇ ವರದಿ ಮಾಡತಕ್ಕದ್ದು.

**9. ಸಾಂಕ್ರಾಮಿಕ ಪ್ರದೇಶವೆಂದು ಘೋಷಿಸಲು ರಾಜ್ಯ ಸರಕಾರದ ಅಧಿಕಾರ:–** (1) 7ನೇ ಉಪಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅಥವಾ 8ನೇಯ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪಶುವೈದ್ಯ ಅಧಿಕಾರಿಯ ವರದಿ ತಲುಪಿದ ಮೇಲೆ, ನಿಯಮಿಸಲಾದ ಪ್ರಾಧಿಕಾರಿಯು ತನಗೆ ಯೋಗ್ಯವೆನಿಸುವಂಥ ಮುಂದಿನ ತನಿಖೆಯನ್ನು ಮಾಡಿದ ತರುವಾಯ, ಆ ಬಗ್ಗೆ ತನ್ನ ಅಭಿಪ್ರಾಯ ಯಾವುದಾದರೂ ಇದ್ದರೆ, ಅದರೊಡನೆ ಅಂಥ ವರದಿಯನ್ನು ರಾಜ್ಯ ಸರಕಾರಕ್ಕೆ ಒಪ್ಪಿಸತಕ್ಕದ್ದು; ಅದು

(ಕ) 7ನೇ ಪ್ರಕರಣದ (1)ನೇ ಉಪಪ್ರಕರಣದ, 7ನೇ ಪ್ರಕರಣದ (3)ನೇಯ ಉಪಪ್ರಕರಣದ ಅಥವಾ 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಘೋಷಣೆಯನ್ನು, ಮಾರ್ಪಾಟುಗಳೊಂದಿಗೆ ಅಥವಾ ಅವುಗಳಿಲ್ಲದೇ ಸ್ಥಿರೀಕರಿಸಬಹುದು; ಅಥವಾ

(ಖ) ಅಂಥ ಯಾವುದೇ ಘೋಷಣೆಯನ್ನು ರದ್ದುಪಡಿಸಬಹುದು,

(2) (ಕ) ಇಂಥ ಘೋಷಣೆಯನ್ನು ರಾಜ್ಯ ಸರಕಾರವು ಮಾರ್ಪಾಟುಗಳೊಂದಿಗೆ ಅಥವಾ ಮಾರ್ಪಾಟುಗಳಿಲ್ಲದೆ ಸ್ಥಿರೀಕರಿಸಿದಲ್ಲಿ, ಅದು ಅದರಲ್ಲಿ ಯಾವುದಾದರೂ ಮಾರ್ಪಾಟುಗಳು ಮಾಡಲಾಗಿದ್ದರೆ ಅವುಗಳೊಂದಿಗೆ ಅದು ಅನ್ವಯಿಸತಕ್ಕ ಪ್ರದೇಶದ ಪರಿಮಿತಿಗಳನ್ನು ಅಧಿಸೂಚನೆಯ ಮೂಲಕ ರಾಜ್ಯ ಸರಕಾರವು ವಿವರಿಸತಕ್ಕದ್ದು ಮತ್ತು ಅಂಥ ಪ್ರದೇಶವು ಸಾಂಕ್ರಾಮಿಕವಾದ ಪ್ರದೇಶವಾಗಿದೆಯೆಂದು ಘೋಷಿಸತಕ್ಕುದು;

(ಖ) ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ತಾನಾಗಿ ಅಥವಾ ನಿಯಮಿಸಲಾದ ಪ್ರಾಧಿಕಾರಿಯ ಮೂಲಕ ಪಶುವೈದ್ಯ ಅಧಿಕಾರಿಯು ಒಪ್ಪಿಸಿದ ಹೆಚ್ಚಿನ ವರದಿಯ ಮೇಲೆ, (ಕ) ಖಂಡದ ಮೇರೆಗೆ ಪ್ರಕಟಿಸಲಾದ ಯಾವುದೇ ಅಧಿಸೂಚನೆಯನ್ನು ಹೆಚ್ಚಿಸಬಹುದು, ತಿದ್ದುಪಡಿ ಮಾಡಬಹುದು, ಹೆಚ್ಚು ಕಡಿಮೆ ಮಾಡಬಹುದು ಅಥವಾ ರದ್ದುಗೊಳಿಸಬಹುದು;

(ಗ) (ಕ) ಅಥವಾ (ಖ) ಖಂಡದ ಮೇರೆಗೆ ಅಧಿಸೂಚನೆಯ ಪ್ರಕಟಣೆಯ ತರುವಾಯ ಸಾಂಕ್ರಾಮಿಕವಾದ ಸ್ಥಳವೆಂದು ಇನ್ಸ್‌ಪೆಕ್ಟರಿನಿಂದ ಅಥವಾ ಪಶುವೈದ್ಯ ಅಧಿಕಾರಿಯಿಂದ ಘೋಷಿಸಲಾದ ಮತ್ತು ಅಂಥ ಅಧಿಸೂಚನೆಯಲ್ಲಿ ವಿವರಿಸಿರುವಂತೆ ಸಾಂಕ್ರಾಮಿಕವಾದ ಪ್ರದೇಶದಲ್ಲಿ ಸೇರಿಸಲ್ಪಟ್ಟಿರದ ಯಾವುದೇ ಸ್ಥಳವು ಸಾಂಕ್ರಾಮಿಕವಾದ ಪ್ರದೇಶವಾಗಿ ಇರುವುದು ಕೊನೆಗೊಳ್ಳತಕ್ಕದ್ದು; ಮತ್ತು ಇನ್ಸ್‌ಪೆಕ್ಟರನು ಅಂಥ ಸ್ಥಳದ ಒಡೆಯನಿಗೆ, ಅಧಿಭೋಗದಾರನಿಗೆ ಅಥವಾ ಅದರ ಸ್ವಾಧೀನ ಹೊಂದಿರುವ ಯಾವನೇ ವ್ಯಕ್ತಿಗೆ ಆ ಪ್ರಕಾರ ನೋಟೀಸು ಕೊಡತಕ್ಕದ್ದು;

(ಘ) (ಕ) ಅಥವಾ (ಖ) ಖಂಡದ ಮೇರೆಗೆ ಹೊರಡಿಸಲಾದ ಅಧಿಸೂಚನೆಯ ಪ್ರತಿಯನ್ನು ಇನ್ಸ್‌ಪೆಕ್ಟರನು, ಸಾಂಕ್ರಾಮಿಕವಾದ ಪ್ರದೇಶದಲ್ಲಿ ಎದ್ದುಕಾಣುವ ಸ್ಥಳದಲ್ಲಿ ಮತ್ತು ಸ್ಥಳೀಯ ಭಾಷೆಯಲ್ಲಿ ಪ್ರದರ್ಶಿಸುವಂತೆ ಮಾಡತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ನಿರ್ದೇಶಿಸಲಾದ ಯಾವುದೇ ಘೋಷಣೆಯನ್ನು ರಾಜ್ಯ ಸರಕಾರವು ರದ್ದುಪಡಿಸಿದಲ್ಲಿ, ಅಂಥ ಘೋಷಣೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸ್ಥಳವು, ಸಾಂಕ್ರಾಮಿಕವಾದ ಸ್ಥಳವಾಗಿ ಇರುವುದು ಕೊನೆಗೊಳ್ಳತಕ್ಕದ್ದು; ಮತ್ತು ಇನ್ಸ್‌ಪೆಕ್ಟರನು ಅಂಥ ಘೋಷಣೆಯ ಪ್ರತಿಗಳನ್ನು, ತಲುಪಿಸಿರುವ ಅಥವಾ ಅಂಥ ಘೋಷಣೆಗಳ ನೋಟೀಸುಗಳನ್ನು ಜಾರಿ ಮಾಡಿರುವ ಎಲ್ಲ ವ್ಯಕ್ತಿಗಳಿಗೆ ಆ ಪ್ರಕಾರ ನೋಟೀಸು ಕೊಡತಕ್ಕದ್ದು.

**10. ಸಾಂಕ್ರಾಮಿಕವಾದ ಪ್ರದೇಶಗಳಿಂದ ಅಥವಾ ಸ್ಥಳಗಳಿಂದ ಲೈಸೆನ್ಸು ಇಲ್ಲದೇ ಪಶುಗಳ ಅಥವಾ ಇತರ ವಸ್ತುಗಳ ಸಾಗಾಣಿಕೆಯನ್ನು ಪ್ರತಿಬಂಧಿಸುವುದು:–** (1) ಈ ಮುಂದೆ ಹೇಳಿರುವ ಉಪಬಂಧಗಳ ಮೇರೆಗೆ ಯಾವುದೇ ಪ್ರದೇಶವನ್ನು ಅಥವಾ ಸ್ಥಳವನ್ನು ಸಾಂಕ್ರಾಮಿಕವಾದ ಪ್ರದೇಶವೆಂದು ಅಥವಾ ಸ್ಥಳವೆಂದು ಘೋಷಿಸಲಾಗಿರುವಲ್ಲಿ, ಅಂಥ ಘೋಷಣೆಯು ಜಾರಿಯಲ್ಲಿ ಉಳಿದಿರುವಾಗಬದುಕಿರುವ, ಅಥವಾ ಸತ್ತಿರುವ ಯಾವುದೇ ಪಶುವನ್ನು ಅಥವಾ ಯಾವುದೇ ಪಶುವಿನ ಯಾವುದೇ ಭಾಗವನ್ನು ಅಥವಾ ಉತ್ಪನ್ನಗಳನ್ನು ಅಥವಾ ಪಶುವಿನ ಸಂಬಂಧದಲ್ಲಿ ಉಪಯೋಗಿಸಲಾದ ಯಾವುದೇ ಆಹಾರವನ್ನು ಹಾಸನ್ನು ಅಥವಾ ಇತರೇ ವಸ್ತುಗಳನ್ನು ಯಾವ ವ್ಯಕ್ತಿಯೂ, ಇನ್ಸ್‌ಪೆಕ್ಟರನು ಮಂಜೂರು ಮಾಡಿದ ಲೈಸೆನ್ಸಿನಲ್ಲಿರುವ ಷರತ್ತುಗಳ ಮೇರೆಗಲ್ಲದೇ ಸಾಗಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಹೇಳಿದ ಯಾವುದೇ ಪಶುವನ್ನು ಅಥವಾ ವಸ್ತುವನ್ನು ಸಾಂಕ್ರಾಮಿಕವಾದ ಪ್ರದೇಶದ ಅಥವಾ ಸ್ಥಳದ ಮುಖಾಂತರ ರೈಲಿನ ಮೂಲಕ ಸಾಗಿಸುವಿಕೆಗೆ ಆ ಉಪಪ್ರಕರಣದಲ್ಲಿರುವ ಯಾವುದೂ ಅನ್ವಯವಾಗತಕ್ಕುದಲ್ಲ.

ಪರಂತು, ಸಾಂಕ್ರಾಮಿಕವಾದ ಪ್ರದೇಶದ ಅತವಾ ಸ್ಥಳದ ಮುಖಾಂತರವಾಗಿ ಅಂಥ ಯಾವುದೇ ಪಶುವನ್ನು ಅಥವಾ ವಸ್ತುವನ್ನು ಸಾಗಿಸುತ್ತಿರುವಾಗ ಅದನ್ನು ಅಲ್ಲಿ ಕೆಳಗಿಳಿಸಿದಲ್ಲಿ, (1)ನೇ ಉಪಪ್ರಕರಣದ ಉಪಬಂಧಗಳ ಮೇರೆಗಲ್ಲದೇ ಅದನ್ನು ಅಲ್ಲಿಂದ ಸಾಗಿಸತಕ್ಕದ್ದಲ್ಲ.

**11. ಸಾಂಕ್ರಾಮಿಕ ಪ್ರದೇಶಗಳಿಂದ ಲೈಸೆನ್ಸಿಲ್ಲದೆ ತರಲಾದ ಪಶು ಇತ್ಯಾದಿಗಳನ್ನು ವಾಪಸ್ಸು ಮಾಡಲು ಅಗತ್ಯಪಡಿಸುವ ಅಧಿಕಾರ :– 10ನೇ** ಪ್ರಕರಣದಲ್ಲಿ ಹೇಳಲಾದ ಯಾವುದೇ ಪಶುವನ್ನು ಅಥವಾ ವಸ್ತುವನ್ನು ಸದರಿ ಪ್ರಕರಣದ ಮೇರೆಗೆ ಮಂಜೂರು ಮಾಡಿದ ಲೈಸೆನ್ಸಿನ ಷರತ್ತಿನ ಮೇರೆಗಲ್ಲದೆ ಬೇರೆ ರೀತಿಯಿಂದ, ಸಾಂಕ್ರಾಮಿತವಾದ ಪ್ರದೇಶದಿಂದ ಅಥವಾ ಸ್ಥಳದಿಂದ ಸಾಗಿಸಲಾಗಿರುವಲ್ಲಿ, ಯಾವನೇ ಇನ್ಸ್‌ಪೆಕ್ಟರನು ಅಥವಾ ಪೊಲೀಸ್ ಅಧಿಕಾರಿಯು, ಅದನ್ನು ಅಂಥ ಪ್ರದೇಶಕ್ಕೆ ಅಥವಾ ಸ್ಥಳಕ್ಕೆ ವಾಪಸ್ಸುಕಳಿಸಬೇಕೆಂದು ಅಂಥ ಪಶುವಿನ ಅಥವಾ ವಸ್ತುವಿನ ಒಡೆಯನಿಗೆ ಅಥವಾ ಅದರ ಸ್ವಾಧೀನ ಹೊಂದಿರುವ ವ್ಯಕ್ತಿಗೆ ಅಗತ್ಯಗೊಳಿಸಹುದು;

ಪರಂತು ಸಾಂಕ್ರಾಮಿಕ ಪಶುಗಳ ಬಗ್ಗೆ ವ್ಯವಹರಿಸಲು ಇನ್ಸ್‌ಪೆಕ್ಟರನಿಗೆ 6ನೇಯ ಪ್ರಕರಣದ ಮೇರೆಗೆ ಇರತಕ್ಕ ಅಧಿಕಾರಗಳನ್ನು, ಈ ಪ್ರಕರಣದಲ್ಲಿರುವ ಯಾವುದೂ ಭಾದಿಸತಕ್ಕುದಲ್ಲ.

**12. ಸಾಂಕ್ರಾಮಿಕವಾದ ಸ್ಥಳಗಳಲ್ಲಿ ಮತ್ತು ಪ್ರದೇಶಗಳಲ್ಲಿ ನಿರೋಧಕ ಸಿಡುಬು ಹಾಕುವುದು ಅಥವಾ ತಡೆಮದ್ದು ಚುಚ್ಚುವುದು:–** (1) ಈ ಅಧಿನಿಯಮದ ಮೇರೆಗೆ ಸಾಂಕ್ರಾಮಿಕವಾದ ಪ್ರದೇಶವೆಂದು ಅಥವಾ ಸ್ಥಳವೆಂದು ಘೋಷಿಸಲಾದ ಯಾವುದೇ ಪ್ರದೇಶದಲ್ಲಿ ಅಥವಾ ಸ್ಥಳದಲ್ಲಿ ಪಶು ವೈದ್ಯಾಧಿಕಾರಿಯು ಆಥವಾ ಪಶು ವೈದ್ಯಾಧಿಕಾರಿಯಿಂದ ಈ ಬಗ್ಗೆ ಅಧಿಕೃತನಿರುವ ಇನ್ಸ್‌ಪೆಕ್ಟರನು ನಿರೋಧಕ ಸಿಡುಬು ಹಾಕುವುದು ಅಥವಾ ತಡೆಮದ್ದು ಚುಚ್ಚುವುದು ಶಕ್ಯವಿರುವ ಅಥವಾ ಕಾರ್ಯಸಾಧ್ಯವಿರುವ ಎಲ್ಲಾ ಪ್ರಸಂಗಗಳಲ್ಲಿ, ಆ ಪ್ರದೇಶದಲ್ಲಿ

ಅಥವಾ ಸ್ಥಳದಲ್ಲಿ ಇರುವ ನಿಯಮಿಸಬಹುದಾದಂಥ ಪಶುಗಳ ವಿಧಗಳ ಅಥವಾ ವರ್ಗಗಳ ಪಶುಗಳಿಗೆ ಸಂದರ್ಭಾನುಸಾರ ಸಿಡುಬು ಹಾಕತಕ್ಕುದು, ತಡೆಮದ್ದು ಚುಚ್ಚತಕ್ಕುದು. ಮತ್ತು ಅಂಥ ಪ್ರತಿಯೊಂದು ಪಶುವಿನ ಒಡೆಯನು ಅಥವಾ ಅವುಗಳ ಸ್ವಾಧೀನವನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು ಅಂಥ ಸಿಡುಬು ಹಾಕುವುದನ್ನು ಅಥವಾ ತಡೆಮದ್ದು ಚುಚ್ಚುವುದನ್ನು, ನಿರ್ವಹಿಸುವ ಪಶುವೈದ್ಯಾಧಿಕಾರಿಗೆ ಅಥವಾ ಇನ್ಸ್‌ಪೆಕ್ಟರನಿಗೆ ಎಲ್ಲ ಸೌಕರ್ಯವನ್ನು ಅಥವಾ ಸಹಾಯವನ್ನು ನೀಡತಕ್ಕುದು.

(2) ಯಾವನೇ ಪಶುವಿಗೆ ಪಶುವೈದ್ಯ ಅಧಿಕಾರಿಯು ಅಥವಾ ಇನ್ಸ್‌ಪೆಕ್ಟರನು ಸಿಡುಬು ಹಾಕಿದಾಗ ಅತವಾ ತಡೆಮದ್ದು ಚುಚ್ಚಿದಾಗ, ಗುರುತಿಸುವ ಸಲುವಾಗಿ, ನಿಯಮಿಸಬಹುದಾದಂಥ ರೀತಿಯಲ್ಲಿ ಆ ಪಶುವಿಗೆ ಗುರುತು ಹಾಕಬಹುದು.

**13. ದೋಣಿಗಳನ್ನು ಮತ್ತು ವಾಹನಗಳನ್ನು ಸ್ವಚ್ಛಮಾಡುವುದು ಮತ್ತು ಸಾಂಕ್ರಾಮಿಕಗೊಳಿಸುವುದು :-** (1) ಸಾಮಾನ್ಯ ಸಾಗಾಟಗಾರನು ಪಶುಗಳ ಸಾಗಾಟಕ್ಕಾಗಿ ಉಪಯೋಗಿಸುತ್ತಿರುವ ಪ್ರತಿಯೊಂದು ದೋಣಿಯನ್ನು ಅಥವಾ ವಾಹನವನ್ನು, ವಿನಿಯಮಿಸಬಹುದಾದಂಥ ಅವಧಿಗಳಲ್ಲಿ ಮತ್ತು ಅಂಥ ರೀತಿಯಲ್ಲಿ ಅವುಗಳನ್ನು ಸ್ವಚ್ಛಗೊಳಿಸತಕ್ಕುದು ಮತ್ತು ನಿಸ್ಸಾಂಕ್ರಾಮಿಕಗೊಳಿಸತಕ್ಕುದು.

(2) ಇಂಥ ದೋಣಿಗಳನು ಅಥವಾ ಪಶುಗಳನ್ನು ಇನ್ಸ್‌ಪೆಕ್ಟರನು ಪಡೆಯಬಹುದಾದ ಮತ್ತು ಪರಿಶೀಲಿಸಬಹುದಾದ ಸ್ಥಳಗಳನ್ನು ರಾಜ್ಯ ಸರಕಾರವು ನೇಮಿಸಬಹುದು ಮತ್ತು ಅದು ನಿರ್ಮಲವಾಗಿರದಿದ್ದರೆ, ಅದನ್ನು ನಿಯಮಿಸಲಾದ ರೀತಿಯಲ್ಲಿ ಸ್ವಚ್ಛಗೊಳಿಸಲು ಮತ್ತು ನಿಸ್ಸಾಂಕ್ರಾಮಿಕಗೊಳಿಸಲು ಅಗತ್ಯಪಡಿಸಬಹುದು.

(3) ಯಾವುದೇ ರೈಲ್ವೆಯ ಸಂಚಾರಿ ಬಂಡಿಗಳಿಗೆ ಈ ಪ್ರಕರಣವು ಅನ್ವಯವಾಗತಕ್ಕದ್ದಲ್ಲ.

**14. ಸಾಂಕ್ರಾಮಿಕವಾದ ಆವರಣಗಳನ್ನು, ದೋಣಿಗಳನ್ನು ಅಥವಾ ವಾಹನಗಳನ್ನು ನಿಸ್ಸಾಂಕ್ರಾಮಿಕಗೊಳಿಸುವುದು:-** ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ಪಶುವೈದ್ಯ ಅಧಿಕಾರಿಯು, ಲಿಖಿತ ಆದೇಶದ ಮೂಲಕ, ಸಾಂಕ್ರಾಮಿತವಾದ ಪಶುವನ್ನು ಇಡಲಾಗಿದ್ದ ಯಾವುದೇ ಭೂಮಿಯ, ಕಟ್ಟಡದ ಅಥವಾ ಇತರ ಸ್ಥಳದ ಅಥವಾ ಯಾವುದೇ ದೋಣಿಯ ಅಥವಾ ವಾಹನದ ಒಡೆಯನಿಗೆ, ಆಧಿಭೋಗದಾರನಿಗೆ ಅಥವಾ ಅವುಗಳ ಸ್ವಾಧೀನ ಹೊಂದಿದ ವ್ಯಕ್ತಿಗೆ ಅಂಥ ಭೂಮಿಯನ್ನು, ಕಟ್ಟಡವನ್ನು, ಸ್ಥಳವನ್ನು ದೋಣಿಯನ್ನು ಅಥವಾ ವಾಹನವನ್ನು ನಿಸ್ಸಾಂಕ್ರಾಮಿಕಗೊಳಿಸಬೇಕೆಂದು ಮತ್ತು ಅವುಗಳ ಒಳಜೋಡಣೆಗಳನ್ನು ಅಥವಾ ಅವುಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿ ಕಂಡುಬಂದ ಇತರ ವಸ್ತುಗಳನ್ನು ಆದೇಶದಲ್ಲಿ ಉಲ್ಲೇಖಿಸಬಹುದಾದ ರೀತಿಯಲ್ಲಿ ಮತ್ತು ಅಂಥ ಮಟ್ಟಿಗೆ ನಿಸ್ಸಾಂಕ್ರಾಮಿಕಗೊಳಿಸಬೇಕೆಂದು ಅಥವಾ ನಾಶಗೊಳಿಸಬೇಕೆಂದು ಅಗತ್ಯಪಡಿಸಬಹುದು; ಅಂಥ ಒಡೆಯನು, ಆಧಿಭೋಗದಾರನು ಅಥವಾ ಸ್ವಾಧೀನ ಹೊಂದಿದ ವ್ಯಕ್ತಿಯು ಅಂಥ ಆದೇಶವನ್ನು ಪಾಲಿಸತಕ್ಕದ್ದು.

**15. ಮರಣೋತ್ತರ ಶವ ಪರೀಕ್ಷೆಯನ್ನು ನಡೆಸಲು ಪಶುವೈದ್ಯ ಅಧಿಕಾರಿಯ ಅಧಿಕಾರ:-** ಮರಣ ಕಾಲದಲ್ಲಿ ಸಾಂಕ್ರಾಮಿಕವಾಗಿದ್ದ ಅಥವಾ ಸಾಂಕ್ರಾಮಿತವಾಗಿದ್ದಿತೆಂದು ಶಂಕಿಸಬಹುದಾಗಿದ್ದ ಯಾವುದೇ ಪಶುವಿನ ಮರಣೋತ್ತರ ಪರೀಕ್ಷೆಯನ್ನು ಪಶುವೈದ್ಯ ಅಧಿಕಾರಿಯ ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ಮಾಡಬಹುದು ಅಥವಾ ಮಾಡಿಸಬಹುದು ಮತ್ತು ಈ ಉದ್ದೇಶಗಳಿಗಾಗಿ ಅವನು ಅಂಥ ಪಶುವಿನ ಮೃತ ದೇಹವನ್ನು ಅಗೆಸಿ ತೆಗೆಸಬಹುದು.

**16. ಸೋಂಕು ಅಥವಾ ಸಾಂಕ್ರಾಮಿಕ ರೋಗಗಳ ವರದಿ ಕೊಡುವುದು ಕೆಲವೊಂದು ವ್ಯಕ್ತಿಗಳ ಕರ್ತವ್ಯ:-** ಪಶುವಿಗೆ ಸೋಂಕು ಅಥವಾ ಸಾಂಕ್ರಾಮಿಕ ರೋಗ ತಲಿದೆಯೆಂದು ನಂಬಲು ತನಗೆ ಕಾರಣವಿದ್ದ ಅದರ ಪ್ರತಿಯೊಬ್ಬ ಒಡೆಯನು ಅಥವಾ ಅದರ ಸ್ವಾಧೀನವನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು

ಮತ್ತು ಅದರ ಚಿಕಿತ್ಸೆಗಾಗಿ ಕರೆಯಲ್ಪಟ್ಟ ಪ್ರತಿಯೊಬ್ಬ ಪಶುವೈದ್ಯನು, ಆ ಪ್ರದೇಶದಲ್ಲಿ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಇನ್ಸ್‌ಪೆಕ್ಟರನಿಗೆ ಆ ಸಂಗತಿಯನ್ನು ಕೂಡಲೇ ವರದಿ ಮಾಡತಕ್ಕದ್ದು;

**17. ಸಾಂಕ್ರಾಮಿಕವಾದ ಪಶುಗಳನ್ನು ಪ್ರತ್ಯೇಕಿಸಿಡಬೇಕಾದ ಕರ್ತವ್ಯ:-** ಪಶುವು ಸಾಂಕ್ರಾಮಿಕಕಾರಿಯಾಗಿದೆಯೆಂದು ನಂಬಲು ತನಗೆ ಕಾರಣವಿದ್ದ ಅದರ ಪ್ರತಿಯೊಬ್ಬ ಒಡೆಯನು ಅಥವಾ ಅದರ ಸ್ವಾಧೀನವನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು, ಸಾಂಕ್ರಾಮಿಕವಾಗಿರುವ ಇತರ ಎಲ್ಲ ಪಶುಗಳಿಂದ ಪ್ರತ್ಯೇಕವಾಗಿರುವ ಸ್ಥಳದಲ್ಲಿ ಅದನ್ನು ಸಾಧ್ಯವಿರಬಹುದಾದ ಮಟ್ಟಿಗೆ ಪ್ರತ್ಯೇಕಿಸಿ ಇಡತಕ್ಕದ್ದು ಮತ್ತು ಸಾಂಕ್ರಾಮಿಕವಲ್ಲದ ಯಾವುದೇ ಪಶುವು ಅಂಥ (ಸಾಂಕ್ರಾಮಿತವಾದ) ಪಶುವಿನ ಸಂಪರ್ಕದಲ್ಲಿ ಬಾರದಂತೆ ಅಥವಾ ಅದರ ಸಮೀಪಕ್ಕೆ ಹೋಗದಂತೆ ಪ್ರತಿಬಂಧಿಸುವ ಬಗ್ಗೆ ಸಾಧ್ಯವಾದ ಎಲ್ಲ ಕ್ರಮಗಳನ್ನು ಕೈಕೊಳ್ಳತಕ್ಕದ್ದು.

**18. ಪ್ರವೇಶದ ಮತ್ತು ಪರಿಶೀಲನೆಯ ಅಧಿಕಾರಗಳು:-** ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ಯಾವನೇ ಇನ್ಸ್‌ಪೆಕ್ಟರನು ಅಥವಾ ಪಶುವೈದ್ಯ ಅಧಿಕಾರಿಯು, ಈ ಅಧಿನಿಯಮದ ಮೂಲಕ ಅಥವಾ ಇದರ ಮೇರೆಗೆ ತನಗೆ ಪ್ರದತ್ತವಾದ ಅಥವಾ ವಿಧಿಸಿದಲಾದ ಕರ್ತವ್ಯಗಳನ್ನು ಚಲಾಯಿಸುವ ಮತ್ತು ಪಾಲಿಸುವ ಉದ್ದೇಶಕ್ಕಾಗಿ ಯಾವುದೇ ಭೂಮಿಯಲ್ಲಿ, ಕಟ್ಟಡದಲ್ಲಿ ಅಥವಾ ಸ್ಥಳದಲ್ಲಿ ಅಥವಾ ಯಾವುದೇ ದೋಣಿಯಲ್ಲಿ ಅಥವಾ ವಾಹನದಲ್ಲಿ ಪ್ರವೇಶಿಸಬಹುದು ಮತ್ತು ಅವುಗಳನ್ನು ಪರಿಶೀಲಿಸಬಹುದು.

**19. ಸಾಂಕ್ರಾಮಿಕ ಪಶುಗಳ ಶವಗಳ ಹೂಳುವಿಕೆಯ ಅಥವಾ ವಿಲೇವಾರಿಯ ರೀತಿ :-** (1) ಮರಣದ ಕಾಲಕ್ಕೆ ಸಾಂಕ್ರಾಮಿಕವಾಗಿದ್ದ ಅಥವಾ ಸಾಂಕ್ರಾಮಿಕಾರಿಯಾಗಿದ್ದಿಂದು ಶಂಕಿಸಲಾದ ಪ್ರತಿಯೊಂದು ಪಶುವನ್ನು ಭೂಮಿಯ ಮೇಲ್ಭಾಗದಿಂದ ಕನಿಷ್ಠ ಆರು ಅಡಿಗಳ ಕೆಳಗೆ ಹೂಳತಕ್ಕದ್ದು ಅಥವಾ ನಿಯಮಿಸಬಹುದಾದ ಬೇರೆ ರೀತಿಯಲ್ಲಿ ಅದರ ವಿಲೇವಾರಿ ಮಾಡತಕ್ಕದ್ದು.

(2) 15ನೇಯ ಪ್ರಕರಣದ ಮೇರೆಗೆ ಮೃತ ದೇಹದ ಶವವನ್ನು ಅಗೆಸಿ ತೆಗೆಯುವ ಪ್ರಸಂಗವನ್ನುಳಿದು, (1)ನೇ ಉಪಪ್ರಕರಣದ ಉಪಬಂಧಗಳಿಗನುಸಾರಿವಾಗಿ ಹೂಳಲಾದ ಪಶುವಿನ ಮೃತ ದೇಹವನ್ನು ಯಾವನೂ ಅಗೆಸಿ ತೆಗೆಯತಕ್ಕದಲ್ಲ ಅಥವಾ ಬೇರೆ ರೀತಿಯಾಗಿ ಸ್ಥಳಾಂತರಿಸತಕ್ಕದ್ದಲ್ಲ.

**20. ಸಾಂಕ್ರಾಮಿಕ ಪ್ರದೇಶಗಳಲ್ಲಿ ಮಾರುಕಟ್ಟೆ, ಜಾತ್ರೆ, ಇತ್ಯಾದಿಗಳಿಗೆ ಪ್ರತಿಬಂಧ :-** ಸಾಂಕ್ರಾಮಿಕವಾದ ಯಾವುದೇ ಪ್ರದೇಶದಲ್ಲಿ ಯಾವನೇ ವ್ಯಕ್ತಿಯು ಕ್ರೀಡೆಯ ಅಥವಾ ವ್ಯಾಪಾರದ ಉದ್ದೇಶಕ್ಕಾಗಿ ಯಾವುದೇ ಪಶು ಮಾರುಕಟ್ಟೆಯನ್ನು, ಪಶು ಜಾತ್ರೆಯನ್ನು, ಪಶು ಪ್ರದರ್ಶನವನ್ನು ಅಥವಾ ಪಶುಗಳ ಇತರ ಬಗೆಯ ಒಟ್ಟುಗೂಡುವಿಕೆಯನ್ನು ಡೆಪ್ಯೂಟಿ ಕಮೀಷನರನ ಅಥವಾ ಈ ಬಗ್ಗೆ ರಾಜ್ಯ ಸರಕಾರದಿಂದ ಅಧಿಕೃತವಾದ ಯಾವನೇ ಅಧಿಕಾರಿಯ ಲಿಖಿತ ಅನುಮತಿಯಿಲ್ಲಿದೆ ಏರ್ಪಡಿಸತಕ್ಕದ್ದಲ್ಲ, ಪ್ರೋತ್ಸಾಹಿಸತಕ್ಕದ್ದಲ್ಲ ಅಥವಾ ನಡೆಸತಕ್ಕದ್ದಲ್ಲ.

**21. ಸಾಂಕ್ರಾಮಿಕ ಪಶುಗಳನ್ನು ಪರೀಕ್ಷೆಗಳಿಗೆ ಒಳಪಡಿಸಲು ಪಶುವೈದ್ಯ ಅಧಿಕಾರಿಯ ಅಧಿಕಾರಗಳು :-** ಪಶುವು ಸಾಂಕ್ರಾಮಿಕವಾಗಿದೆಯೆಂದು ಪಶುವೈದ್ಯಕೀಯ ಅಧಿಕಾರಿಯು ಶಂಕಿಸಿದರೆ, ಅವನು ಅದನ್ನು ನಿಯಮಿಸಬಹುದಾದಂಥ ಪರೀಕ್ಷೆಗಳಿಗೆ ಒಳಪಡಿಸಬಹುದು ಮತ್ತು ಪರೀಕ್ಷೆಯನ್ನು ನಡೆಸುವಲ್ಲಿ ಅವನಿಗೆ ಅಂಥ ಪಶುವಿನ ಒಡೆಯನು ಅಥವಾ ಅದರ ಸ್ವಾಧೀನವನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು ಪ್ರತಿಯೊಂದು ಸೌಕರ್ಯವನ್ನು ಅಥವಾ ಸಹಾಯವನ್ನು ಒದಗಿಸತಕ್ಕದ್ದು.

## ಅಧ್ಯಾಯ – 3

## ಅಪರಾಧಗಳು ಮತ್ತು ದಂಡನೆ

**22. ದಂಡಗಳು:–** ಯಾವನೊಬ್ಬನು,–

(ಕ) 5ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ಅಧಿಸೂಚನೆಯಲ್ಲಿ ಉಲ್ಲೇಖಿಸಲಾದ ನಿರ್ದೇಶನಗಳನ್ನು ಕಾರ್ಯರೂಪಕ್ಕೆ ತರಲು ಒಪ್ಪಿದರೆ, ಅಥವಾ ಅದರ ಷರತ್ತುಗಳನ್ನು ಉಲ್ಲಂಘಿಸಿದರೆ, ಅಥವಾ

(ಖ) 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಇನ್ಸ್‌ಪೆಕ್ಟರನು ಮಾಡಿದ ಆದೇಶವನ್ನು ಪಾಲಿಸಲು ತಪ್ಪಿದರೆ, ಅಥವಾ

(ಗ) ಸಾಂಕ್ರಾಮಿಕ ಪ್ರದೇಶದಿಂದ ಅಥವಾ ಸ್ಥಳದಿಂದ ಯಾವುದೇ ಪಶುವನ್ನು ಅಥವಾ ವಸ್ತುವನ್ನು 10ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ, ಸಾಗಿಸಿದರೆ ಅಥವಾ

(ಘ) 11ನೇ ಪ್ರಕರಣದ ಮೇರೆಗೆ ಇನ್ಸ್‌ಪೆಕ್ಟರನು ಅಥವಾ ಪೊಲೀಸು ಅಧಿಕಾರಿಯು ಕೊಟ್ಟ ಯಾವುದೇ ನಿರ್ದೇಶವನ್ನು ಪಾಲಿಸಲು ತಪ್ಪಿದರೆ, ಅಥವಾ

(ಙ) 12ನೇ ಪ್ರಕರಣವು ಅಗತ್ಯಪಡಿಸುವಂಥ ಪ್ರತಿಯೊಂದು ಸೌಕರ್ಯವನ್ನು ಮತ್ತು ಸಹಾಯವನ್ನು ಪಶುವೈದ್ಯ ಅಧಿಕಾರಿಗೆ ಒದಗಿಸಲು ತಪ್ಪಿದರೆ, ಅಥವಾ

(ಚ) 13ನೇ ಪ್ರಕರಣದ (1)ನೇಯ ಮತ್ತು (2)ನೇಯ ಉಪಪ್ರಕರಣಗಳ ಮೇರೆಗೆ ಅಗತ್ಯಪಡಿಸಲಾದಂತೆ, ಪಶುಗಳನ್ನು ಸಾಗಿಸುವುದಕ್ಕಾಗಿ ಉಪಯೋಗಿಸಲಾದ ಯಾವುದೇ ದೋಣಿಯನ್ನು ಅಥವಾ ವಾಹನವನ್ನು ನಿಯಮಿಸಲಾದ ರೀತಿಯಲ್ಲಿ ಸ್ವಚ್ಛಗೊಳಿಸಲು ಅಥವಾ ನಿಸ್ಸಾಂಕ್ರಾಮಿಕಗೊಳಿಸಲು ತಪ್ಪಿದರೆ, ಅಥವಾ

(ಛ) 14ನೇ ಪ್ರಕರಣದ ಮೇರೆಗೆ ಪಶುವೈದ್ಯ ಅಧಿಕಾರಿಯು ಮಾಡಿದ ಆದೇಶವನ್ನು ಪಾಲಿಸಲು ತಪ್ಪಿದರೆ, ಅಥವಾ

(ಜ) 16ನೇ ಪ್ರಕರಣವು ಅಗತ್ಯಪಡಿಸುವಂತೆ ಪಶುವು ಸಾಂಕ್ರಾಮಿಕವಾಗಿದೆಯೆಂದು ವರದಿ ಮಾಡಲು ತಪ್ಪಿದರೆ, ಅಥವಾ

(ಝ) 17ನೇ ಪ್ರಕರಣವು ಅಗತ್ಯಪಡಿಸುವಂತೆ, ಯಾವುದೇ ಪಶುವನ್ನು ಪ್ರತ್ಯೇಕಿಸಿಡಲು ತಪ್ಪಿದರೆ, ಅಥವಾ

(ಞ) 19ನೇ ಪ್ರಕರಣದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದರೆ, ಅಥವಾ

(ಟ) 20ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ, ಸಂದರ್ಭಾನುಸಾರ ಪಶು ಮಾರುಕಟ್ಟೆಯನ್ನು, ಪಶು ಜಾತ್ರೆಯನ್ನು, ಪಶು ಪ್ರದರ್ಶನವನ್ನು ಅಥವಾ ಯಾವುದೇ ರೀತಿಯ ಪಶುಗಳ ಒಟ್ಟುಗೂಡುವಿಕೆಯನ್ನು ಸಂಘಟಿಸಿದರೆ, ನಡೆಸಿದರೆ ಅಥವಾ ಪ್ರೋತ್ಸಾಹಿಸಿದರೆ–

ಮೊದಲ ಸಲದ ಅಪರಾಧಸಿದ್ಧಿಯ ಸಂದರ್ಭದಲ್ಲಿ ಒಂದು ನೂರು ರೂಪಾಯಿಗಳವರೆಗೆ ಮತ್ತು ಈ ಪ್ರಕರಣದ ಅದೇ ಖಂಡದ ಮೇರೆಗಿನ ಅಥವಾ ಬೇರೆ ಯಾವುದೇ ಖಂಡದ ಮೇರೆಗಿನ ಎರಡನೇ ಅಥವಾ ಆ ಮುಂದಿನ ಅಪರಾಧ ಸಿದ್ಧಿಯ ಸಂದರ್ಭದಲ್ಲಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತವಾಗತಕ್ಕದ್ದು.

**23. ಸಾಂಕ್ರಾಮಿಕ ಪಶುಗಳನ್ನು ಸುತ್ತುಕಟ್ಟು ಹಾಕಿರದ ಭೂಮಿಯಲ್ಲಿ ಇರಿಸುವ ಅಥವಾ ಮೇಯಿಸುವ ಬಗ್ಗೆ ದಂಡ:–** ಯಾವನೊಬ್ಬನು ಯಾವುವೇ ಪಶುಗಳು ಸಾಂಕ್ರಾಮಿಕವಾಗಿದೆಯೆಂದು ತಾನು ಅರಿತಿದ್ದು, ಇತರ ವ್ಯಕ್ತಿಗಳಿಗೆ ತಮ್ಮ ಪಶುಗಳ ಬಗ್ಗೆ ಪ್ರವೇಶಾಧಿಕಾರವಿದ್ದ ಯಾವುದೇ ಪ್ರದೇಶದಲ್ಲಿ, ಅರಣ್ಯದಲ್ಲಿ, ಬಯಲಿನಲ್ಲಿ, ರಸ್ತೆ ಪಕ್ಕದಲ್ಲಿ ಅಥವಾ ಸುತ್ತುಕಟ್ಟು ಹಾಕಿರದ ಇತರ ಯಾವುದೇ ಭೂಮಿಯಲ್ಲಿ ಅವುಗಳನ್ನು ಇರಿಸಿದರೆ, ಅಥವಾ ಮೇಯಿಸಿದರೆ ಅವನು ಮೊದಲ ಸಲದ ಅಪರಾಧ ಸಿದ್ಧಿಯ ಸಂದರ್ಭದಲ್ಲಿ ಒಂದು ನೂರು ರೂಪಾಯಿಗಳವರೆಗೆ ಮತ್ತು ಎರಡನೇ ಅಥವಾ ಆ ಮುಂದಿನ ಅಪರಾಧಸಿದ್ಧಿಯ ಸಂದರ್ಭದಲ್ಲಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**24. ಸಾಂಕ್ರಾಮಿಕ ಪಶುಗಳನ್ನು ಮಾರುಕಟ್ಟೆಗೆ ತರುವ ಬಗ್ಗೆ ದಂಡ:–** ಯಾವನೊಬ್ಬನು ಯಾವುದೇ ಪಶುವು ಸಾಂಕ್ರಾಮಿಕವಾಗಿದೆಯೆಂದು ತಾನು ಅರಿತಿದ್ದು ಅಥವಾ ಹಾಗೆಂದು ನಂಬಲು ಕಾರಣವಿದ್ದು ಮಾರುಕಟ್ಟೆಗೆ, ಜಾತ್ರೆಗೆ, ಪ್ರದರ್ಶನಕ್ಕೆ ಅಥವಾ ಪಶುಗಳ ಒಟ್ಟು ಗೂಡುವಿಕೆಯ ಇತರ ಸ್ಥಳಕ್ಕೆ ಅದನ್ನು ತಂದರೆ ಅಥವಾ ತರಲು ಪ್ರಯತ್ನಿಸಿದರೆ ಅವರು ಮೊದಲ ಸಲದ ಅಪರಾಧಸಿದ್ಧಿಯ ಸಂದರ್ಭದಲ್ಲಿ, ಒಂದು ನೂರು ರೂಪಾಯಿಗಳವರೆಗೆ ಮತ್ತು ಎರಡನೇ ಅಥವಾ ಆ ಮುಂದಿನ ಅಪರಾಧಸಿದ್ಧಿಯ ಸಂದರ್ಭದಲ್ಲಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**25. ಸಾಂಕ್ರಾಮಿಕ ಪಶುವಿನ ಮೃತದೇಹವನ್ನು ನದಿ ಇತ್ಯಾದಿಗಳಲ್ಲಿ ಇರಿಸುವ ಬಗ್ಗೆ ದಂಡ:–** ಯಾವನೊಬ್ಬನು, ಪಶುವು ಮರಣ ಕಾಲಕ್ಕೆ ಸಾಂಕ್ರಾಮಿಕವಾಗಿದ್ದಿತು ಅಥವಾ ಸಾಂಕ್ರಾಮಿಕವಾಗಿದ್ದಿತೆಂದು ಅಥವಾ ಹಾಗೆ ಸಾಂಕ್ರಾಮಿಕವಾಗಿದೆಯೆಂದು ಶಂಕಿಸಿ ನಾಶಗೊಳಿಸಲಾದ ಯಾವುದೇ ಪಶುವಿನ ನಿಯಮಿಸಬಹುದಾದಷ್ಟು ಅಂತರದೊಳಗೆ ಯಾವುದೇ ನದಿಯಲ್ಲಿ, ಸರೋವರದಲ್ಲಿ, ಕಾಲುವೆಯಲ್ಲಿ ಅಥವಾ ಇತರ ಬಗೆಯ ನೀರಿನಲ್ಲಿ ಅಥವಾ ಸಮುದ್ರದಲ್ಲಿ ಇರಿಸಿದರೆ ಅಥವಾ ಇರಿಸುವಂತೆ ಮಾಡಿದರೆ ಅಥವಾ ಇರಿಸಲು ಅನುಮತಿ ಕೊಟ್ಟರೆ, ಅವನು ಮೊದಲ ಅಪರಾಧಸಿದ್ಧಿಯ ಸಂದರ್ಭದಲ್ಲಿ ಆರು ತಿಂಗಳುಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದ ದಂಡನೆ ಅಥವಾ ಅವೆರಡರಿಂದಲೂ ಮತ್ತು ಎರಡನೇಯ ಅಥವಾ ಆ ಮುಂದಿನ ಅಪರಾಧಸಿದ್ಧಿಯ ಸಂಬಂಧದಲ್ಲಿ ಆರು ತಿಂಗಳುಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದ ದಂಡ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಅವರೆಡರಿಂದಲೂ ದಂಡಿತನಾಗತಕ್ಕದ್ದು.

**26. ರೋಗಗ್ರಸ್ತ ಪಶುವಿನ ಮೃತದೇಹವನ್ನು ಅಗೆದು ತೆಗೆಯುವ ಬಗ್ಗೆ ದಂಡ:–** ಯಾವನೊಬ್ಬನು ಪಶುವಿನ ಮರಣದ ಕಾಲಕ್ಕೆ ಸಾಂಕ್ರಾಮಿಕವಾಗಿದ್ದ ಅಥವಾ ಸಾಂಕ್ರಾಮಿಕವಾಗಿದ್ದಿತೆಂದು ನಾಶಗೊಳಿಸಲ್ಪಟ್ಟಿದ್ದ ಆ ಪಶುವಿನ ಮೃತದೇಹವನ್ನು ಅಥವಾ ಮೃತದೇಹದ ಯಾವುದೇ ಭಾಗವನ್ನು, ವಿಧಿಬದ್ಧವಾದ ಅಧಿಕಾರವಿಲ್ಲದೆ ಅಗೆದು ತೆಗೆದರೆ ಅಥವಾ ತೆಗೆಯಿಸಿದರೆ ಅವನು ಮೊದಲ ಸಲದ ಅಪರಾಧಸಿದ್ಧಿಯ ಸಂದರ್ಭದಲ್ಲಿ ಒಂದು ನೂರು ರೂಪಾಯಿಗಳವರೆಗೆ ಮತ್ತು ಎರಡನೇ ಅಥವಾ ಆ ಮುಂದಿನ ಅಪರಾಧ ಸಿದ್ಧಿಯ ಸಂದರ್ಭದಲ್ಲಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**27. ಸಾಂಕ್ರಾಮಿಕ ಪಶುಗಳ ಮಾರಾಟ ಅಥವಾ ಹಸ್ತಾಂತರದ ಬಗ್ಗೆ ದಂಡ:–** ಯಾವನೊಬ್ಬನು, ಯಾವುದೇ ಪಶುವು ಸಾಂಕ್ರಾಮಿತಕಾರಿಯಿದೆಯೆಂದು ತನಗೆ ಗೊತ್ತಿದ್ದು ಅಥವಾ ಹಾಗೆ ನಂಬಲು ತನಗೆ ಕಾರಣವಿದ್ದ ಆ ಪಶುವನ್ನು ಮತ್ತೊಬ್ಬ ವ್ಯಕ್ತಿಗೆ ಮಾರಿದರೆ ಅಥವಾ ಮಾರಲು ಪ್ರಯತ್ನಿಸಿದರೆ ಅಥವಾ ಯಾವುದೇ ರೀತಿಯಲ್ಲಿ ಹಸ್ತಾಂತರಿಸಿದರೆ, ಅವನು ಮೊದಲ ಸಲದ ಅಪರಾಧಸಿದ್ಧಿಯ ಸಂದರ್ಭದಲ್ಲಿ ಒಂದು ನೂರು ರೂಪಾಯಿಗಳವರೆಗೆ, ಮತ್ತು ಎರಡನೇ ಅಥವಾ ಆ ಮುಂದಿನ ಅಪರಾಧಸಿದ್ಧಿಯ ಸಂದರ್ಭದಲ್ಲಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**28. ಪೀಡನೆಗಾಗಿ ಪ್ರವೇಶ, ಪರಿಶೀಲನೆ ಅಥವಾ ವಶಪಡಿಸಿಕೊಳ್ಳುವಿಕೆ ಇವುಗಳ ಬಗ್ಗೆ ದಂಡ :–** (1) ಈ ಅಧಿನಿಯಮದ ಮೇರೆಗೆ ನೇಮಿಸಲಾದ ಇನ್ಸ್‌ಪೆಕ್ಟರ್ ಅಥವಾ ಪಶುವೈದ್ಯ ಅಧಿಕಾರಿಯು ಯಾವುದೇ ಜಮೀನನ್ನು, ಕಟ್ಟಡವನ್ನು ಅಥವಾ ಇತರ ಸ್ಥಳವನ್ನು, ಅಥವಾ ಯಾವುದೇ ದೋಣಿಯನ್ನು ಅಥವಾ ವಾಹನವನ್ನು ಪೀಡನಾಕಾರಿಯಾಗಿ ಅಥವಾ ಅನವಶ್ಯಕವಾಗಿ ಪ್ರವೇಶಿಸಿದರೆ ಅಥವಾ ಪರಿಶೀಲಿಸಿದರೆ ಅಥವಾ ಯಾವುದೇ ಪಶುವನ್ನು ವಶಪಡಿಸಿಕೊಂಡರೆ ಅಥವಾ ತಡೆದಿಟ್ಟರೆ, ಅವನು ಅಪರಾಧ ಸಿದ್ಧಿಯ ಬಳಿಕ, ಆರು ತಿಂಗಳುಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದ ದಂಡನೆ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಇವೆರಡರಿಂದಲೂ ದಂಡಿತನಾತಕ್ಕದ್ದು.

(2) ಅಪರಾಧ ಘಟಿಸಿದ ತಾರೀಖಿನಿಂದ ಮೂರು ತಿಂಗಳುಗಳು ಕಳೆದ ತರುವಾಯ ಈ ಪ್ರಕರಣದ ಮೇರೆಗೆ ಯಾವ ಪ್ರಾಸಿಕ್ಯೂಷನನ್ನೂ ಹೂಡತಕ್ಕದ್ದಲ್ಲ.

## ಅಧ್ಯಾಯ – 4
## ಸಂಕೀರ್ಣ

**29. ಆದೇಶಗಳನ್ನು ಪಾಲಿಸಲು ಮತ್ತು ಪ್ರವರ್ತನಗೊಳಿಸಲು ಅವಧಿ:–** (1) ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ಹೊರಡಿಸಿದ ಯಾವುದೇ ನಿಯಮದ ಅಥವಾ ಅಧಿಸೂಚನೆಯ ಮೇರೆಗೆ ಮಾಡಲಾದ ಯಾವುದೇ ನೋಟೀಸಿನ ಅಧ್ಯಪೇಕ್ಷೆಯ ಅಥವಾ ಆದೇಶದ ಮೂಲಕ, ಯಾವನೇ ವ್ಯಕ್ತಿಗೆ, ಅವನು ಒಡೆತನ ಹೊಂದಿದ ಅಥವಾ ಅವನ ಆಧಿಭೋಗದಲ್ಲಿದ್ದ ಅಥವಾ ಅವನು ಸ್ವಾಧೀನ ಹೊಂದಿರುವ ಯಾವುದೇ ಸ್ವತ್ತಿನ ಸಂಬಂಧದಲ್ಲಿ ಯಾವುದೇ ಕ್ರಮಕೈಕೊಳ್ಳಲು ಅಥವಾ ಯಾವುದೇ ಕಾರ್ಯ ಮಾಡಲು ಅಗತ್ಯಪಡಿಸಲಾದಲ್ಲಿ, ಸಂದರ್ಭಾನುಸಾರ ಅಂಥ ಕ್ರಮವನ್ನು ಕೈಕೊಳ್ಳತಕ್ಕ ಅಥವಾ ಅಂಥ ಕಾರ್ಯವನ್ನು ಮಾಡತಕ್ಕ ಒಂದು ಯುಕ್ತವಾದ ಅವಧಿಯನ್ನು ಅಂಥ ನೋಟೀಸಿನಲ್ಲಿ, ಅಧ್ಯಪೇಕ್ಷೆಯಲ್ಲಿ ಅಥವಾ ಆದೇಶದಲ್ಲಿ ಉಲ್ಲೇಖಿಸತಕ್ಕದ್ದು.

(2) ಹಾಗೆ ಉಲ್ಲೇಖಿಸಲಾದ ಅವಧಿಯೊಳಗಾಗಿ ಅಂಥ ಕ್ರಮಗಳನ್ನು ಕೈಕೊಳ್ಳದಿದ್ದರೆ ಅಥವಾ ಅಂಥ ಕಾರ್ಯವನ್ನು ಮಾಡದಿದ್ದರೆ, ಆ ನೋಟೀಸನ್ನು ಅಧ್ಯಪೇಕ್ಷೆಯನ್ನು ಅಥವಾ ಆದೇಶವನ್ನು ಹೊರಡಿಸಿದ ಪ್ರಾಧಿಕಾರಿಯು ಸಂಬಂಧಿತ ವ್ಯಕ್ತಿಯ ಖರ್ಚಿನಿಂದ ಆ ಕ್ರಮಗಳನ್ನು ಕೈಗೊಳ್ಳುವಂತೆ ಅಥವಾ ಆ ಕಾರ್ಯವನ್ನು ಪೂರೈಸುವಂತೆ ಮಾಡಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ಕೈಕೊಳ್ಳಲಾದ ಯಾವುದೇ ಕ್ರಮಗಳ ಅಥವಾ ಮಾಡಲಾದ ಕಾರ್ಯದ ಖರ್ಚುಗಳನ್ನು, ಭೂ ಕಂದಾಯದ ಬಾಕಿ ಎಂಬಂತೆ ಸಂಬಂಧಿತ ವ್ಯಕ್ತಿಯಿಂದ ವಸೂಲು ಮಾಡತಕ್ಕದ್ದು.

**30. ವಾರಂಟು ಇಲ್ಲದೆ ದಸ್ತಗಿರಿ ಮಾಡಲು ಪೋಲೀಸ್ ಅಧಿಕಾರಿಯ ಅಧಿಕಾರ:–** ಪಶುವೈದ್ಯ ಅಧಿಕಾರಿಯ ಲಿಖಿತ ಪ್ರಾರ್ಥನೆಯ ಮೇಲೆ ಸಬ್‌ಇನ್ಸ್‌ಪೆಕ್ಟರ್‌ನ ದರ್ಜೆಗಿಂತ ಕಡಿಮೆಯಿಲ್ಲದ ಯಾವನೇ ಪೋಲೀಸ್ ಅಧಿಕಾರಿಯು ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧಕ್ಕೆ ಸಂಬಂಧಿಸಿದ ಯಾವನೇ ವ್ಯಕ್ತಿಯನ್ನು ವಾರಂಟು ಇಲ್ಲದೆ ದಸ್ತಗಿರಿ ಮಾಡಬಹುದು.

**31. ಅಪರಾಧಗಳ ವಿಚಾರಣೆ:–** ಪಶುವೈದ್ಯ ಅಧಿಕಾರಿಯ ಫಿರ್ಯಾದು ಅಥವಾ ವರದಿಯ ಮೇಲಲ್ಲದೆ, ಈ ಅಧಿನಿಯಮದ ಮೇರೆಗಿನ ಅಪರಾಧದ ವಿಚಾರಣೆಯನ್ನು ಯಾವ ಮ್ಯಾಜಿಸ್ಟ್ರೇಟನೂ ಮಾಡತಕ್ಕದ್ದಲ್ಲ.

**32. ಮ್ಯಾಜಿಸ್ಟ್ರೇಟರ ಅಧಿಕಾರ ವ್ಯಾಪ್ತಿ:–** ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧದ ವಿಚಾರಣೆಯನ್ನು ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟನಾಗಲಿ ಅಥವಾ ಈ ಬಗ್ಗೆ ರಾಜ್ಯ ಸರಕಾರದಿಂದ ವಿಶೇಷವಾಗಿ ಶಕ್ತಗೊಳಿಸಲಾದ ದ್ವಿತೀಯ ದರ್ಜೆಯ ಮ್ಯಾಜಿಸ್ಟ್ರೇಟನಾಗಲೀ ಆಗಿರದ ಯಾವ ಮ್ಯಾಜಿಸ್ಟ್ರೇಟನೂ ಮಾಡತಕ್ಕದ್ದಲ್ಲ.

**33. ಪರಿಹಾರದ ಕ್ಲೇಮಿನ ಪ್ರತಿಬಂಧ:–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಲಾದ ಯಾವುದೇ ಕಾರ್ಯದ ಕಾರಣದಿಂದ ಯಾವುದೇ ಪಶುವಿಗೆ ಅಥವಾ ವಸ್ತುವಿಗೆ ಆದ ನಾಶದ, ಅಥವಾ ತನಗುಂಟಾದ ಇತರ ಯಾವುದೇ ಹಾನಿಯ, ಗಾಯದ, ಕೇಡಿನ ಅಥವಾ ಅನಾನುಕೂಲದ ಸಂಬಂಧದಲ್ಲಿ ಯಾವುದೇ ಪರಿಹಾರಕ್ಕೆ ಯಾವ ವ್ಯಕ್ತಿಯೂ ಹಕ್ಕುಳ್ಳವನಾಗಿರತಕ್ಕದ್ದಲ್ಲ.

**34. ಈ ಅಧಿನಿಯಮದ ಮೇರೆಗೆ ಕ್ರಮ ಕೈಕೊಳ್ಳುವ ಅಧಿಕಾರಿಗಳ ರಕ್ಷಣೆ:–** (1) ಈ ಅಧಿನಿಯಮದ ಮೇರೆಗೆ ಮಾಡಲಾದ ಅಥವಾ ಮಾಡಲ್ಪಟ್ಟಿತೆಂದು ಭಾವಿಸಲ್ಪಡುವ ಯಾವುದೇ ಕಾರ್ಯದ ಸಂಬಂಧದಲ್ಲಿ, ರಾಜ್ಯ ಸರ್ಕಾರದ ಯಾವನೇ ಅಧಿಕಾರಿಯ ಅಥವಾ ನೌಕರನ ವಿರುದ್ಧ ರಾಜ್ಯ ಸರ್ಕಾರದ ಪೂರ್ವಭಾವಿ ಮಂಜೂರಾತಿ ಇಲ್ಲದೇ ಯಾವುದೇ ಪ್ರಾಸಿಕ್ಯೂಷನ್ನಾಗಲೀ ಅಥವಾ ಇತರ ಯಾವುದೇ ವ್ಯವಹರಣೆಯಾಗಲೀ ನಡೆಯತಕ್ಕದ್ದಲ್ಲ.

(2) ಈ ಅಧಿನಿಯಮದ ಮೂಲಕ ಅಥವಾ ಇದರ ಮೇರೆಗೆ ಅವನ ಕರ್ತವ್ಯಗಳ ಪಾಲನೆಯ ಅಥವಾ ಕಾರ್ಯಗಳ ನಿರ್ವಹಣೆಯ ಕಾಲದಲ್ಲಿ ಯಾವುದೇ ಕಾರ್ಯವನ್ನು ಸದ್ಭಾವನೆಯಿಂದ ಮಾಡಿದ್ದರೆ, ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಯಲ್ಲಿ ರಾಜ್ಯ ಸರಕಾರದ ಯಾವ ಅಧಿಕಾರಿಯೂ ಅಥವಾ ನೌಕರನೂ, ಅಂಥ ಯಾವುದೇ ಕಾರ್ಯದ ಬಗ್ಗೆ ಹೊಣೆಗಾರನಾಗಿರತಕ್ಕದ್ದಲ್ಲ.

**35. ಕೆಲವೊಂದು ದಾವೆಗಳ ಮತ್ತು ಪ್ರಾಸಿಕ್ಯೂಷನ್ನುಗಳ ಬಗ್ಗೆ ಅವಧಿ ನಿರ್ಣಯ:–** ಈ ಅಧಿನಿಯಮದ ಮೇರೆಗೆ ಮಾಡಲಾದ ಅಥವಾ ಮಾಡಲಾಗಿದೆಯೆಂದು ಭಾವಿಸಲ್ಪಡುವ ಯಾವುದೇ ಕಾರ್ಯದ ಬಗ್ಗೆ, ಫಿರ್ಯಾದು ಮಾಡಲಾದ ಕಾರ್ಯದ ತಾರೀಖಿನಿಂದ 6 ತಿಂಗಳೊಳಗಾಗಿ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ವ್ಯವಹರಣೆಯನ್ನು ಹೂಡಲಾಗಿರದಿದ್ದರೆ, ಅಂಥ ಯಾವುದೇ ಕಾರ್ಯದ ಸಂಬಂಧದಲ್ಲಿ ರಾಜ್ಯ ಸರಕಾರದ ವಿರುದ್ಧ ಯಾವ ದಾವೆಯೂ, ಮತ್ತು ರಾಜ್ಯ ಸರಕಾರದ ಯಾವನೇ ಅಧಿಕಾರಿಯ ಅಥವಾ ನೌಕರನ ವಿರುದ್ಧ ಯಾವ ಪ್ರಾಸಿಕ್ಯೂಷನ್ನೂ ಅಥವಾ ಇತರ ಯಾವ ವ್ಯವಹರಣೆಯೂ ಹೂಡಲಾಗತಕ್ಕದ್ದಲ್ಲ.

**36. ನಿಯಮಗಳನ್ನು ರಚಿಸಲು ಅಧಿಕಾರ:–** (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರಲು, ಪೂರ್ವಭಾವಿಯಾಗಿ ಪ್ರಕಟಿಸಬೇಕೆಂಬುದಕ್ಕೆ ಒಳಪಟ್ಟು ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮುಂಚೆ ಹೇಳಿರುವ ಅಧಿಕಾರದ ವ್ಯಾಪಕತೆಗೆ ಬಾಧೆಬಾರದಂತೆ, ಇಂಥ ನಿಯಮಗಳು ಕೆಳಗಿನವುಗಳ ಬಗ್ಗೆ ಉಪಬಂಧಿಸಬಹುದು.

(i) (4)ನೇಯ ಉಪಪ್ರಕರಣದ ಮೇರೆಗೆ ಪಶುವನ್ನು ಒಪ್ಪಿಸಬಹುದಾದ ಪರೀಕ್ಷೆ; ಮತ್ತು 6ನೇಯ ಪ್ರಕರಣದ (5)ನೇಯ ಉಪಪ್ರಕರಣದ ಮೇರೆಗೆ ಪಶುವಿನ ಬಗ್ಗೆ ವ್ಯವಹರಿಸಬಹುದಾದ ರೀತಿ;

(ii) 7, 8 ಮತ್ತು 9ನೇ ಪ್ರಕರಣಗಳ ಉದ್ದೇಶಗಳಿಗಾಗಿ ನಿಯಮಿಸಲಾಗುವ ಪ್ರಾಧಿಕಾರಿ.

(iii) ಇನ್ಸ್‌ಪೆಕ್ಟರನು 10ನೇ ಪ್ರಕರಣದ ಮೇರೆಗೆ ಲೈಸೆನ್ಸುಗಳನ್ನು ಮಂಜೂರು ಮಾಡುವ ಬಗೆಗಿನ ವಿದ್ಯಮಾನಗಳು, ಮತ್ತು ಇಂಥ ಲೈಸೆನ್ಸುಗಳ ನಮೂನೆ ಮತ್ತು ಷರತ್ತು;

(iv) 12ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಹೇಳಲಾದ ಪ್ರತಿಯೊಂದು ಸೋಂಕು ಅಥವಾ ಸಾಂಕ್ರಾಮಿಕ ರೋಗದ ಬಗ್ಗೆ ಸಿಡುಬು ಹಾಕಬೇಕಾದ ಅಥವಾ ತಡೆಮದ್ದು ಚುಚ್ಚಬೇಕಾದ ಪಶುಗಳ ಬಗೆ ಅಥವಾ ವರ್ಗಗಳು;

(v) 12ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪಶುವಿಗೆ ಗುರುತು ಹಾಕಬಹುದಾದ ರೀತಿ;

(vi) 13ನೇ ಪ್ರಕರಣದ ಮೇರೆಗೆ ದೋಣಿಗಳನ್ನು ಮತ್ತು ವಾಹನಗಳನ್ನು ಸ್ವಚ್ಛಗೊಳಿಸತಕ್ಕ ಮತ್ತು ನಿಸ್ಸಾಂಕ್ರಾಮಿಕಗೊಳಿಸತಕ್ಕ ಅವಧಿಗಳು ಮತ್ತು ರೀತಿ ;

(vii) 14ನೇ ಪ್ರಕರಣದ ಮೇರೆಗೆ ಭೂಮಿಯನ್ನು, ಕಟ್ಟಡವನ್ನು ಅಥವಾ ಇತರ ಸ್ಥಳಗಳನ್ನು ಅಥವಾ ವಾಹನಗಳನ್ನು ಅಥವಾ ದೋಣಿಯನ್ನು ನಿಸ್ಸಾಂಕ್ರಾಮಿಕಗೊಳಿಸುವುದು;

(viii) 15ನೇ ಪ್ರಕರಣದ ಮೇರೆಗೆ ಮೃತದೇಹ ಪರೀಕ್ಷೆ ಮಾಡುವುದು.

(ix) 18ನೇ ಪ್ರಕರಣದ ಮೇರೆಗೆ ಇನ್ಸ್‌ಪೆಕ್ಟರನ ಅಥವಾ ಪಶುವೈದ್ಯಕೀಯ ಅಧಿಕಾರಿಯ ಅಧಿಕಾರಗಳನ್ನು ವಿನಿಮಯಗೊಳಿಸುವುದು.;

(x) 19ನೇ ಪ್ರಕರಣದ (1)ನೇಯ ಉಪಪ್ರಕರಣದ ಮೇರೆಗೆ ಪಶುವನ್ನು ಹೂಳಬಹುದಾದ ರೀತಿ;

(xi) 25ನೇ ಪ್ರಕರಣದ ಮೇರೆಗೆ ದಂಡೆಯಿಂದ ಯಾವ ಅಂತರದೊಳಗಾಗಿ ಮೃತದೇಹವನ್ನು ಇಡತಕ್ಕುದಲ್ಲವೋ ಆ ಅಂತರ ಮತ್ತು

(xii) ಈ ಅಧಿನಿಯಮದ ಮೂಲಕ ನಿಯಮಿಸಬೇಕಾದ ಸ್ಪಷ್ಟ ಅಗತ್ಯವಿರುವ ಅಥವಾ ಅದಕ್ಕೆ ಅವಕಾಶವಿರುವ ಬೇರೆ ಎಲ್ಲ ವಿಷಯಗಳು.

**37. ನಿಯಮಗಳನ್ನು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಇಡಬೇಕಾದುದು :–** 36ನೇ ಪ್ರಕರಣದ ಮೇರೆಗೆ ರಚಿಸಲಾದ ಎಲ್ಲಾ ನಿಯಮಗಳನ್ನು ಮತ್ತು 5ನೇಯ ಪ್ರಕರಣದ ಮೇರೆಗೆ ಹೊರಡಿಸಲಾದ ಎಲ್ಲ ಅಧಿಸೂಚನೆಗಳನ್ನು, ಅವುಗಳನ್ನು ಮಾಡಲಾದ ಅಥವಾ ಹೊರಡಿಸಲಾದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನವು ಅಧಿವೇಶನದಲ್ಲಿರುವಾಗ ಅದರ ಮುಂದೆ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು; ಮತ್ತು ಆ ಅವಧಿಯ ಒಂದು ಅಧಿವೇಶನವನ್ನು ಅಥವಾ ಎರಡು ಅಥವಾ ಹೆಚ್ಚು ಅಧಿವೇಶನಗಳನ್ನು ಒಳಗೊಳ್ಳಬಹುದು; ಮತ್ತು ಸದರಿ ಅವಧಿಯು ಮುಗಿಯುವ ಮೊದಲು, ರಾಜ್ಯ ವಿಧಾನ ಮಂಡಲದ ಯಾವುದೊಂದು ಸದನವು ಅಧಿನಿಯಮಗಳಲ್ಲಿ ಅಥವಾ ಅಧಿಸೂಚನೆಗಳಲ್ಲಿ ಯಾವುದಾದರೂ ಮಾರ್ಪಾಟನ್ನು ಮಾಡಿದರೆ ಅಥವಾ ಯಾವುದೇ ನಿಯಮವು ಅಥವಾ ಅಧಿಸೂಚನೆಯು ಪರಿಣಾಮಿಯಾಗತಕ್ಕುದಲ್ಲವೆಂದು ನಿರ್ದೇಶಿಸಿದರೆ ಮತ್ತು ಆ ಮಾರ್ಪಾಟಿಗೆ ಅಥವಾ ನಿರ್ದೇಶಕ್ಕೆ ಇನ್ನೊಂದು ಸದನವು ಸಮ್ಮತಿಸಿದರೆ ಆ ನಿಯಮಗಳು ಅಥವಾ ಅಧಿಸೂಚನೆಗಳು ಆ ತರುವಾಯಗಳಲ್ಲಿ ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಿಯಾಗತಕ್ಕುದು, ಅಥವಾ ಪರಿಣಾಮಿಯಾಗಿರತಕ್ಕದ್ದಲ್ಲ.

**38. ನಿರಸನ ಮತ್ತು ಉಳಿಸುವಿಕೆಗಳು :–** ಮುಂಬಯಿ ಪ್ರದೇಶದಲ್ಲಿ ಜಾರಿಯಲ್ಲಿರುವಂತಹ ಮುಂಬಯಿ ಪಶುಗಳ ಸೋಂಕು ರೋಗಗಳ (ನಿಯಂತ್ರಣ) ಅಧಿನಿಯಮ 1948 (1948ರ ಮುಂಬಯಿ LIX ಅಧಿನಿಯಮ), ಮದ್ರಾಸ್ ಪ್ರದೇಶದಲ್ಲಿ ಜಾರಿಯಲ್ಲಿರುವಂತಹ ಮದ್ರಾಸ್ ದನಗಳ ರೋಗಗಳ ಅಧಿನಿಯಮ, 1866 (1866ರ ಮದ್ರಾಸ್ II ಅಧಿನಿಯಮ) ಮತ್ತು ಮದ್ರಾಸ್ ದೊಡ್ಡರೋಗ ಅಧಿನಿಯಮ, 1940 (1940 ರ ಮದ್ರಾಸ್ XIX ಅಧಿನಿಯಮ), ಕೊಡಗು ಜಿಲ್ಲೆಯಲ್ಲಿ ಜಾರಿಯಲ್ಲಿರುವಂತಹ ಕೊಡಗು ಪಶುಗಳ ಸೊಂಕು ರೋಗಗಳ ಅಧಿನಿಯಮ 1941 (1941ರ ಕೊಡಗು IV ಅಧಿನಿಯಮ), ಕರ್ನಾಟಕ ಪ್ರದೇಶದಲ್ಲಿ ಜಾರಿಯಲ್ಲಿರುವಂತಹ ಕರ್ನಾಟಕ ಪಶುಗಳ ರೋಗಗಳ ಅಧಿನಿಯಮ 1949 (1949ರ ಕರ್ನಾಟಕ XXI ಅಧಿನಿಯಮ), ಮುಂಬಯಿ ಮತ್ತು ಮದ್ರಾಸು ಪ್ರದೇಶಗಳಲ್ಲಿ ಜಾರಿಯಲ್ಲಿರುವಂತಹ ಗ್ಲ್ಯಾಂಡರ್ಸ್ ಮತ್ತು ಫ್ಯಾರ್ಸೀ ಅಧಿನಿಯಮ, 1899

(1899ರ ಕೇಂದ್ರ XIII ಅಧಿನಿಯಮ), ಮತ್ತು ಡೌರೀನ್ ಅಧಿನಿಯಮ, 1910 (1910ರ ಕೇಂದ್ರ X ಅಧಿನಿಯಮ), ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ (1899ರ ಕರ್ನಾಟಕ III ಅಧಿನಿಯಮ), 6ನೇ ಪ್ರಕರಣವು, ಸದರೀ ಅಧಿನಿಯಮಗಳ ನಿರಸನದ ಬಗ್ಗೆ ಅನ್ವಯಿಸತಕ್ಕದ್ದು; ಮತ್ತು ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ 8 ಮತ್ತು 24ನೇ ಪ್ರಕರಣಗಳು, ಸದರಿ ಅಧಿನಿಯಮಗಳು ಕರ್ನಾಟಕ ಅಧಿನಿಯಮವೊಂದರಿಂದ ನಿರಸನಗೊಳಿಸಲ್ಪಟ್ಟಿದ್ದವು ಮತ್ತು ಪುನಃ ಅಧಿನಿಯಮಿತಗೊಳಿಸಲ್ಪಟ್ಟಿದ್ದವು ಎಂಬಂತೆ ಅನ್ವಯವಾಗತಕ್ಕದ್ದು.

* * * *